ಜನಶಕ್ತಿ

ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com

ಕರ್ನಾಟಕ :

ಎರಡು ದಶಕಗಳ ಜಾಗತೀಕರಣ ಪ್ರಕ್ರಿಯೆ

ಪರಿಣಾಮಗಳು - ಪರಿಹಾರಗಳು



ವಿಶೇಷ ಸಂಚಿಕೆ

ಕರ್ನಾಟಕ :
ಎರಡು ದಶಕಗಳ ಜಾಗತೀಕರಣ ಪ್ರಕ್ರಿಯೆ
ಪರಿಣಾಮಗಳು – ಪರಿಹಾರಗಳು

•

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪಾದಕೀಯ ಕಛೇರಿ :

ಇ.ಎಂ.ಎಸ್. ಭವನ

ನಂ. 37/ಎ, 8ನೇ ಅಡ್ಡರಸ್ತೆ, ಅಂಚೆ ಕಛೇರಿ ಹತ್ತಿರ

ಮಹಾಲಕ್ಷ್ಮಿ ಬಡಾವಣೆ, ಬೆಂಗಳೂರು – 560 086

ದೂರವಾಣಿ : 080-23491114

Editors Email ID : js.weekly@yahoo.com

ಆಡಳಿತ ಕಛೇರಿ :

'ಸೂರಿ ಭವನ', ನಂ. 40/5, 2ನೇ 'ಬಿ' ಮುಖ್ಯ ರಸ್ತೆ,

16ನೇ ಅಡ್ಡ ರಸ್ತೆ, ಎಸ್.ಆರ್.ನಗರ,

ಬೆಂಗಳೂರು – 560 027

ದೂರವಾಣಿ : 080–22234369

janashakthi13.admn@gmail.com

Blog : janashakthi.wordpress.com,

ಪರಿವಿಡಿ

ಯಾರ ಉದ್ಧಾರಕ್ಕಾಗಿ ಈ ನವ ಉದಾರೀಕರಣ?

ಭಾರತ ತೀವ್ರವಾದ ಬಿಕ್ಕಟ್ಟೊಂದನ್ನು ಎದುರುನೋಡುತ್ತಿದೆ. ಇಪ್ಪತ್ತು ವರ್ಷಗಳ ಹಿಂದೆ, ಆರ್ಥಿಕ ಬಿಕ್ಕಟ್ಟೊಂದನ್ನು ತಡೆಯಲು ಭಾರತ ಸರ್ಕಾರ ನವ ಉದಾರೀಕರಣದ ಸುಧಾರಣೆಗಳನ್ನು ಜಾರಿಗೆ ತಂದಿತ್ತು. ಕಳೆದ ವರ್ಷದ ವರೆಗೂ, ಶೇ. 8ರಷ್ಟು ಬೆಳವಣಿಗೆಯ ದರವನ್ನು ಅದರ ಪ್ರಮುಖ ಸಾಧನೆಗಳಲ್ಲಿ ಒಂದು ಎಂದು ಬಿಂಬಿಸಲಾಗಿತ್ತು. ಈ ಅವಧಿಯಲ್ಲಿ ಕೇಂದ್ರದಲ್ಲಿ ಅಧಿಕಾರವಹಿಸಿಕೊಂಡ ಎಲ್ಲಾ ಸರ್ಕಾರಗಳು ತಮ್ಮ ನಡುವಿನ ರಾಜಕೀಯ ಭಿನ್ನತೆಯ ಹೊರತಾಗಿಯೂ, ಈ ನವ ಉದಾರೀಕರಣದ ಧೋರಣೆಗಳನ್ನು ಜಾರಿಗೊಳಿಸಿವೆ ಮತ್ತು ಆ ಮೂಲಕ ಈ ಸುಧಾರಣೆಗಳಿಗೆ ರಾಜಕೀಯ ಒಮ್ಮತ ಇದೆಯೆಂದೂ ಮತ್ತು ಅವುಗಳನ್ನು ಬದಲಾಯಿಸಲು ಸಾಧ್ಯವಿಲ್ಲ ಎಂದೂ ನಂಬುವಂತೆ ಮಾಡಿವೆ. ಈ ಸುಧಾರಣೆಗಳ ವಿರುದ್ಧ ವಾದಿಸುವವರ ಧ್ವನಿಗಳನ್ನು ದಮನಮಾಡಲಾಗುತ್ತಿದೆ. ಬೆಳವಣಿಗೆಯ ದರದಲ್ಲಿ ಉಂಟಾಗುವ ಕುಸಿತಕ್ಕೂ ಸಹ ಸುಧಾರಣೆಗಳನ್ನು ಮುಂದುವರೆಸುವಲ್ಲಿ ಮತ್ತು ಅರ್ಥವ್ಯವಸ್ಥೆಯನ್ನು ಇನ್ನಷ್ಟು ಉದಾರೀಕರಣಗೊಳಿಸುವಲ್ಲಿನ ವಿಳಂಬವೇ ಕಾರಣ ಎಂದು ವಾದಿಸಲಾಗುತ್ತದೆ. ಪ್ರಸಕ್ತ ಕೇಂದ್ರ ಸರ್ಕಾರವು ದೇಶದ ಅರ್ಥವ್ಯವಸ್ಥೆಯನ್ನು ಇನ್ನೂ ಉದಾರೀಕರಣಗೊಳಿಲು ಬದ್ಧವಾಗಿದೆ. ಹಲವು ರಾಜ್ಯ ಸರ್ಕಾರಗಳು ಇದೇ ಉದಾರೀಕರಣದ ನೀತಿಗಳನ್ನು ಜಾರಿಗೆ ತರುವುದರಲ್ಲಿ ನಿರತವಾಗಿವೆ. ಗುಜರಾತ್‌ನಲ್ಲಿ ಮೋದಿ ಸರ್ಕಾರ ಇದೇ ಧೋರಣೆಗಳನ್ನು ಜಾರಿಗೆ ತಂದಿದೆ. ಕರ್ನಾಟಕದಲ್ಲಿ ಕಳೆದ 5 ವರ್ಷಗಳ ಕಾಲ ಅಧಿಕಾರದಲ್ಲಿದ್ದ ಬಿಜೆ ಸರ್ಕಾರ ಇದೇ ಉದಾರೀಕರಣ ನೀತಿಗಳನ್ನು ಜಾರಿಗೆ ತರುವುದರಲ್ಲಿ ನಿರತವಾಗಿತ್ತು. ರಾಜ್ಯಗಳಲ್ಲಿ ಅಧಿಕಾರಕ್ಕೆ ಬಂದಿರುವ ಪ್ರಾದೇಶಿಕ ಪಕ್ಷಗಳ ಸರ್ಕಾರಗಳು ಸಹ ಇದೇ ಉದಾರೀಕರಣ ನೀತಿಗಳನ್ನು ಜಾರಿಗೆ ತಂದಿವೆ.

ನವ ಉದಾರವಾದಿ ಆರ್ಥಿಕ ಧೋರಣೆಗಳು ನಮ್ಮ ದೇಶದ ಎಲ್ಲಾ ಹರಹುಗಳ ಮೇಲೆ ಪರಿಣಾಮಬೀರಿರುವುದನ್ನು ನಾವು ಕಾಣುತ್ತಿದ್ದೇವೆ. ಪರಿಣಾಮವಾಗಿ, ಸಂಪನ್ಮೂಲಗಳ ವಿತರಣೆಯಲ್ಲಿ ಅಸಮಾನತೆ ಹೆಚ್ಚಾಯಿತು. ಆದಾಯದ ಅಂತರಗಳು ಹೆಚ್ಚಾದವು. ಭಂಡ ಬಂಡವಾಳಶಾಹಿ ಬೇರುಗಳು ಆಳಕ್ಕೆ ಇಳಿದವು. ಭ್ರಷ್ಟಾಚಾರ ಸಾಂಸ್ಥಿಕ ರೂಪ ಪಡೆಯಿತು. ಕೃಷಿ ಬಿಕ್ಕಟ್ಟು ಮತ್ತು ರೈತರ ಆತ್ಮಹತ್ಯೆ ಗ್ರಾಮೀಣ ಆರ್ಥಿಕವನ್ನು ಹಾಳುಗೆಡವಿದವು. ಗ್ರಾಮೀಣ ಪ್ರದೇಶಗಳಿಂದ ನಗರಪ್ರದೇಶಗಳಿಗೆ ಜನರ ವಲಸೆ ಪ್ರವಾಹದಂತೆ ಹರಿಯುತ್ತಿದೆ. ನಗರ ಪ್ರದೇಶಗಳಲ್ಲಿಯೂ ಸಂಘಟಿತ ಕೈಗಾರಿಕಾ ಚಟುವಟಿಕೆಗಳ ಗಮನಾರ್ಹ ವಿಸ್ತರಣೆಯೇನೂ ಆಗುತ್ತಿಲ್ಲ. ಬದಲಾಗಿ, ಅಸಂಘಟಿತ ವಲಯ ಬೆಳೆಯುತ್ತಿದೆ. ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವವರಲ್ಲಿ ಮಹಿಳೆಯರೇ ದೊಡ್ಡ ಸಂಖ್ಯೆಯಲ್ಲಿದ್ದಾರೆ. ಶ್ರಮ ಶಕ್ತಿಯ ಗುತ್ತಿಗೇಕರಣ ಹೆಚ್ಚುತ್ತಿದೆ. ಸೇವಾ ವಲಯದ ಬೆಳವಣಿಗೆಯ ಪ್ರಯೋಜನ ಸಮಾಜದ ಎಲ್ಲಾ ವಿಭಾಗಗಳಿಗೆ ಲಭಿಸುತ್ತಿಲ್ಲ.

ದೇಶದ ಅರ್ಥವ್ಯವಸ್ಥೆಯ ಮೇಲೆ ಮಾತ್ರವಲ್ಲ, ದೇಶದ ಪ್ರಜಾಸತ್ತಾತ್ಮಕ ಸಂಸ್ಥೆಗಳ ಮೇಲೆಯೂ ನವ ಉದಾರೀಕರಣದ ಧೋರಣೆಗಳು ಪರಿಣಾಮ ಬೀರಿವೆ. ನಮ್ಮ ದೇಶದ ವಿದೇಶಾಂಗ ಧೋರಣೆಯ ಮೇಲೆ ಅದರ ಪರಿಣಾಮ ಬಹಳ ಸ್ಪಷ್ಟವಾಗಿ ಕಾಣುತ್ತಿದೆ. ಅಲಿಪ್ತ ಧೋರಣೆಗೆ ತಿಲಾಂಜಲಿಯನ್ನಿತ್ತು ಅಮೇರಿಕೆಗೆ

ಶರಣಾಗುವ ಧೋರಣೆಯನ್ನು ಅ ್ಪಕೊಳ್ಳಲಾಗಿದೆ. ಪಾಲೆಸ್ತೀನ್ ಅಂತಹ ಪ್ರಶ್ನೆಗಳಿಗೆ ಭಾರತ ವ್ಯಕ್ತಪಡಿಸುತ್ತಿದ್ದ ಸೌಹಾರ್ದತೆ ಇಂದು ಕಣ್ಮರೆಯಾಗುತ್ತಿದೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ನಾಯಕತ್ವವನ್ನು ವಹಿಸಿಕೊಂಡಿದ್ದ ನಮ್ಮ ದೇಶ ಈಗ ಸಾಮ್ರಾಜ್ಯಶಾಹಿ ಶಕ್ತಿಗಳ ಗುಲಾಮನ ಪಾತ್ರ ನಿರ್ವಹಿಸುತ್ತಿದೆ. ಸಾಮ್ರಾಜ್ಯಶಾಹಿ ದೇಶಗಳೊಂದಿಗೆ ರಕ್ಷಣಾ ಒಪ್ಪಂದಗಳು ಮತ್ತು ಜಂಟೀ ಮಿಲಿಟರಿ ಕಾರ್ಯಾಚರಣೆಗಳು ಹೆಚ್ಚಾಗುತ್ತಿವೆ.

ಸಮಾಜವನ್ನು ಹೆಚ್ಚು ಹೆಚ್ಚಾಗಿ ಅರಾಜಕೀಯಗೊಳಿಸಲಾಗುತ್ತಿದೆ. ಸಮಾಜವನ್ನು ಕಾಡುತ್ತಿರುವ ಎಲ್ಲಾ ಅನಿಷ್ಠಗಳಿಗೆ ರಾಜಕೀಯ ಪಕ್ಷಗಳನ್ನು ಮತ್ತು ರಾಜಕಾರಣಿಗಳನ್ನು ದೂಷಿಸಲಾಗುತ್ತಿದೆ. ಧೋರಣೆಗಳ ಪಾತ್ರವನ್ನು ಮರೆಮಾಚಲಾಗುತ್ತದೆ. ಸಮಾಜದ ಬದಲಾವಣೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳನ್ನು ಮಾದರಿಗಳಾಗಿ ಬಿಂಬಿಸಲಾಗುತ್ತಿದೆ. ಜನತೆಯನ್ನು ಬಾಧಿಸುತ್ತಿರುವ ಪ್ರಶ್ನೆಗಳ ಕುರಿತಾಗಿ ಸಂಸದೀಯ ಚರ್ಚೆಗಳು ವಿರಳವಾಗುತ್ತಿವೆ. ಶಾಸಕಾಂಗದ ವಿಮರ್ಶೆ ಇಲ್ಲದ ಕಾರ್ಯಾಂಗದ ತೀರ್ಮಾನಗಳು ಮತ್ತು ಆದೇಶಗಳು ಹೆಚ್ಚು ಪ್ರಬಲವಾಗುತ್ತಿವೆ. ಪ್ರಜಾಪ್ರಭುತ್ವ ಎಂಬುದು ಕೇವಲ ಮತದಾನಕ್ಕೆ ಸೀಮಿತವಾಗುತ್ತಿದೆ. ಅತಂತ್ರ ಜನಾದೇಶಗಳು ಮತ್ತು ಕಿಚಡಿ ರಾಜಕಾರಣ ಸಾಮಾನ್ಯವಾಗುತ್ತಿದೆ. ಪ್ರಾದೇಶಿಕ ರಾಜಕೀಯ ಪಕ್ಷಗಳು ರಾಷ್ಟ್ರೀಯ ರಾಜಕಾರಣದಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸತೊಡಗಿವೆ. ಆದರೆ ಅವುಗಳು ತಮ್ಮ ಪ್ರಾದೇಶಿಕ ಹಿತಕ್ಕಾಗಿ ರಾಷ್ಟ್ರೀಯ ಹಿತವನ್ನು ಕಡೆಗಣಿಸುವ ಸಮಯ ಸಾಧಕ ನಿಲುಮೆಗಳಿಗೆ ಹೆಚ್ಚೆಚ್ಚು ಅಂಟಿಕೊಳ್ಳುತ್ತಿವೆ.

ಐಡೆಂಟಿಟಿ ರಾಜಕಾರಣ ಪ್ರಬಲವಾಗುತ್ತಿದೆ. ಮತಧರ್ಮ, ಜಾತಿ, ಲಿಂಗ, ಪ್ರದೇಶ ಆಧಾರಿತ ಬೇಡಿಕೆಗಳು ಮತ್ತು ಆಂದೋಲನಗಳು ಹೆಚ್ಚುತ್ತಿವೆ. ಈ ಬೆಳವಣಿಗೆ ವರ್ಗ ಆಧಾರಿತ ರಾಜಕಾರಣಕ್ಕೆ ಗಂಭೀರ ಸವಾಲು ಎಸೆಯುತ್ತಿದೆ.

ನ್ಯಾಯಾಂಗದ ಕ್ರಿಯಾಶೀಲತೆ ಹೆಚ್ಚಾಗುತ್ತಿರುವುದನ್ನು ಕಾಣುತ್ತಿದ್ದೇವೆ. ಅನೇಕ ಸಂದರ್ಭಗಳಲ್ಲಿ ನ್ಯಾಯಾಂಗ, ಕಾರ್ಯಾಂಗ ಮತ್ತು ಶಾಸಕಾಂಗಗಳ ನಡುವೆ ಸಂಘರ್ಷದ ಪರಿಸ್ಥಿತಿ ನಿರ್ಮಾಣ ಆಗುತ್ತಿರುತ್ತದೆ. "ಅಧಿಕಾರ ವ್ಯಾ ್ತಿಯನ್ನು ಪ್ರತ್ಯೇಕಿಸುವ" ಸಂವಿಧಾನದ ಗಡಿರೇಖೆ ಮಂದವಾಗುತ್ತಿದೆ. ಪ್ರಾತಿನಿಧಿಕವಲ್ಲದ ನ್ಯಾಯಾಂಗ ಮತ್ತು ಅಧಿಕಾರಿ ವರ್ಗದ ತೀರ್ಮಾನಗಳಿಗೆ ತಲೆಬಾಗಬೇಕು ಎಂಬ ಅಭಿಪ್ರಾಯ ಗಟ್ಟಿಗೊಳ್ಳುತ್ತಿದೆ.

ನಮ್ಮ ಸಂವಿಧಾನದ ಪ್ರಸ್ತಾವನೆಯಲ್ಲಿನ, 'ಪ್ರಜಾಸತ್ತಾತ್ಮಕ, ಜಾತ್ಯಾತೀತ, ಸಾರ್ವಭೌಮ, ಸಮಾಜವಾದಿ' ಗಣರಾಜ್ಯದ ಆದರ್ಶಗಳು ಕೇವಲ ಘೋಷಣೆಗಳಾಗಿ ಉಳಿದಿವೆ. ಸ್ವಾತಂತ್ರ್ಯಕ್ಕಾಗಿ ನಡೆದ ಸುದೀರ್ಘ ಹೋರಾಟದಲ್ಲಿ ಮೂಡಿ ಬಂದಿದ್ದ ಈ ಆದರ್ಶಗಳನ್ನು ಈಗ ಮೂಲೆಗೆ ಸರಿಸಲಾಗಿದೆ. ದೇಶದ ವಿಭಜನೆಗೆ ಕಾರಣವಾದ ಕೋಮುವಾದವು ಇನ್ನೂ ಜೀವಂತವಾಗಿದ್ದು ದೇಶಕ್ಕೇ ಬೆದರಿಕೆ ಹಾಕುತ್ತಿದೆ. ದೇಶವು ಇಂದು ಎದುರಿಸುತ್ತಿರುವ ಎಲ್ಲಾ ಸಮಸ್ಯೆಗಳಿಗೆ ಕೋಮುವಾದ ಮತ್ತು ಆರ್ಥಿಕ ಉದಾರೀಕರಣದ ಗುಜರಾತ್ ಮಾದರಿಯನ್ನು ಪರ್ಯಾಯವಾಗಿ ಬಿಂಬಿಸಲಾಗುತ್ತಿದೆ. ನಮ್ಮ ಸಂವಿಧಾನದ ಪ್ರಸ್ತಾವನೆಯಲ್ಲಿರುವ 'ಸಮಾಜವಾದಿ' ಎಂಬ ಪರಿಕಲ್ಪನೆಯನ್ನೇ ತೆಗೆದು ಹಾಕಬೇಕೆಂಬ ಚರ್ಚೆ ನಡೆಯುತ್ತಿದೆ.

ಹೀಗೆ ಭಾರತದಲ್ಲಿ ಕಳೆದ ಎರಡು ದಶಕಗಳಿಂದ ಜಾರಿಯಲ್ಲಿರುವ ನವ ಉದಾರೀಕರಣದ ಧೋರಣೆಗಳು ದೇಶದ ಸ್ವಾವಲಂಬನೆ, ಸಾರ್ವಭೌಮತೆ, ಐಕ್ಯತೆ, ಸಮಗ್ರತೆಗಳ ಮೇಲೆ ವಿಧ್ವಂಸಕ ಪರಿಣಾಮಗಳನ್ನು ಬೀರುತ್ತಾ ಬಂದಿವೆ. ಹಾಗಾದರೆ ಈ ಉದಾರೀಕರಣದ ಧೋರಣೆಗಳು ಯಾರ ಉದ್ಧಾರಕ್ಕಾಗಿ? ಇವು ವಿಶ್ವ ಹಣಕಾಸು ಬಂಡವಾಳದ ಎಲ್ಲೆ ಇಲ್ಲದ ಲಾಭದ ದಾಹವನ್ನು ತೃ ್ತಿಪಡಿಸುವುದಕ್ಕಾಗಿ. ಹೆಚ್ಚೆಚ್ಚು ಲಾಭದ ಹುಡುಕಾಟದಲ್ಲಿ ವಿಶ್ವದಾದ್ಯಂತ ಹರಿದಾಡುವ ಈ

ಹಣಕಾಸು ಬಂಡವಾಳವು ಯಾವುದೇ ಸಾರ್ವಭೌಮ ದೇಶದ ಗಡಿಗಳನ್ನು ಗೌರವಿಸುದಿಲ್ಲ. ಅದು ನುಗ್ಗುತ್ತದೆ. ಸಾರ್ವಭೌಮ ದೇಶಗಳು ತಮ್ಮ ಕಾನೂನುಗಳ ಅಡೆತಡೆಗಳನ್ನು ಕಿತ್ತುಹಾಕಿ ತನ್ನನ್ನು ಸ್ವಾಗತಿಸಬೇಕೆಂದು ಬಯಸುತ್ತದೆ. ಎಲ್ಲಾ ದೇಶಗಳು, ಮುಖ್ಯವಾಗಿ ತೃತೀಯ ಜಗತ್ತಿನ ದೇಶಗಳು ಮಂಡಿಯೂರಿ ತನ್ನನ್ನು ಬರಮಾಡಿಕೊಳ್ಳಬೇಕೆಂದು ಬೆದರಿಸುತ್ತದೆ. ಇಂತಹ ಬೆದರಿಕೆಗಳಿಗೆ ರಣಹೇಡಿಯಂತೆ ಶರಣಾಗಿರುವ ಭಾರತ ಸರ್ಕಾರ ವಿಶ್ವ ಹಣಕಾಸು ಬಂಡವಾಳಕ್ಕೆ ಉದಾರವಾಗಿರಲು ನಿರ್ಧರಿಸಿ 1990 ರ ದಶಕದಿಂದ ನವ ಉದಾರೀಕರಣದ ಧೋರಣೆಗಳನ್ನು ಅನುಷ್ಠಾನಗೊಳಿಸುತ್ತಿದೆ. ವಿಶ್ವ ಹಣಕಾಸು ಬಂಡವಾಳ ಈ ದರಿದ್ರ ದೇಶಕ್ಕೆ ಕಾಲಿಟ್ಟರೆ ಎಲ್ಲಾ ಸಮಸ್ಯೆಗಳು ಬಗೆಹರಿಯಲಿವೆ ಎಂದು ಜನತೆಯನ್ನು ನಂಬಿಸುತ್ತಿದೆ.

ನವ ಉದಾರವಾದಿ ಧೋರಣೆಗಳ ಅನುಷ್ಠಾನದ ಪರಿಣಾಮವಾಗಿ ದೇಶದಲ್ಲಿ ಶತಕೋಟ್ಯಾಧಿಪತಿಗಳ ಸಂಖ್ಯೆ ಹೆಚ್ಚಾಗಿದೆ. ಮೇಲ್‌ಮಧ್ಯಮ ವರ್ಗದ ಜನರ ಆದಾಯ ಗಣನೀಯವಾಗಿ ಹೆಚ್ಚಾಗಿದೆ. ಭಾರತ ಹೊಳೆಯುತ್ತಿದೆ! ಆದರೆ ಭಾರತದೊಳಗೆ ಇನ್ನೊಂದು ಭಾರತ ಇದೆ. ಅದು ನರಳುತ್ತಿದೆ. ಉದ್ಯೋಗರಹಿತ ಬೆಳವಣಿಗೆಯಿಂದ ಅದು ಸೊರಗುತ್ತಿದೆ. ಕೃಷಿ ಹಾಗೂ ಕೃಷಿಕರಿಗೆ ಇಲ್ಲಿ ಉಳಿಗಾಲ ಇಲ್ಲದಂತಾಗಿದೆ. ಪ್ರಭುತ್ವ ತನ್ನ ಜವಾಬ್ದಾರಿಗಳಿಂದ ಹಿಂದಕ್ಕೆ ಸರಿಯುತ್ತಿರುವುದರಿಂದ ದೇಶದ ಜನತೆ ಆಹಾರ, ಆಶ್ರಯ, ಆರೋಗ್ಯ , ಅರಿವು ಮುಂತಾದ ಸಂವಿಧಾನಬದ್ಧ ಹಕ್ಕುಗಳಿಂದ ವಂಚಿತರಾಗುತ್ತಿದ್ದಾರೆ. ಮಹಿಳೆಯರು, ದಲಿತರು, ಆದಿವಾಸಿಗಳು, ಧಾರ್ಮಿಕ ಅಲ್ಪಸಂಖ್ಯಾತರು ನಿರಂತರ ದಾಳಿ ದಬ್ಬಾಳಿಕೆಗಳಿಗೆ ತುತ್ತಾಗುತ್ತಿದ್ದಾರೆ.

ಇದೆಲ್ಲವನ್ನು ಸಹಿಸಿಕೊಂಡು ಭಾರತದ ಜನತೆ ಮೌನವಹಿಸಿದೆ ಎಂದು ಇದರ ಅರ್ಥವಲ್ಲ. ವಿಶ್ವ ಹಣಕಾಸು ಬಂಡವಾಳದೊಂದಿಗೆ ಕೈಜೋಡಿಸಿರುವ ಭಾರತದ ಆಳುವ ವರ್ಗಗಳು ಶೋಷಿತ ಜನಸಮೂಹಗಳಲ್ಲಿ ಕೀಳು ಅಭಿರುಚಿಯನ್ನು ಬೆಳೆಸಲು ಪ್ರಯತ್ನಿಸುತ್ತವೆ. ಭ್ರಷ್ಟಾಚಾರಕ್ಕೆ ಅವರು ಒಗ್ಗುವಂತೆ ಮಾಡುತ್ತವೆ. ಚುನಾವಣೆಗಳಲ್ಲಿ ಹಣ, ಹೆಂಡದ ಆಮಿಷಗಳನ್ನು ವೊಡ್ಡುವ ಮೂಲಕ ಅವರ ದಿಕ್ಕು ತಪ್ಪಿಸುತ್ತವೆ. ಹಣಕ್ಕಾಗಿ ಕೈವೊಡ್ಡುವ ಸಮೂಹಗಳನ್ನು ಸೃಷ್ಟಿಸುತ್ತವೆ.

ಆದಾಗ್ಯೂ ಭಾರತದ ಶೋಷಿತ ಜನಸಮೂಹಗಳ ನಡುವೆ ಚಿಂತನ-ಮಂಥನ ನಡೆದಿದೆ. ಅತೃಪ್ತಿ, ಆಕ್ರೋಶ ಭುಗಿಲೇಳುತ್ತಿದೆ. ಸ್ವಯಂ ನಿರ್ಧಾರದ ಹೋರಾಟಗಳು ಆಗಾಗ, ಅಲ್ಲಲ್ಲಿ ಸ್ಫೋಟಗೊಳ್ಳುತ್ತಿವೆ. ಪರ್ಯಾಯಕ್ಕಾಗಿ, ಪರ್ಯಾಯ ಧೋರಣೆಗಳಿಗಾಗಿ ಹುಡುಕಾಟ ನಡೆಯುತ್ತಿದೆ. ಎಡ ಶಕ್ತಿಗಳು ಜನತೆಯ ನಡುವೆ ಕಾರ್ಯೋನ್ಮುಖವಾಗಿವೆ. ನವ ಉದಾರೀಕರಣದ ಧೋರಣೆಗಳ ವಿಧ್ವಂಸಕ ಸ್ವರೂಪವನ್ನು ಜನತೆಗೆ ಮನವರಿಕೆ ಮಾಡುವ ದೊಡ್ಡ ಜವಾಬ್ದಾರಿಯನ್ನು ಎಡಶಕ್ತಿಗಳು ನಿರ್ವಹಿಸಬೇಕಾಗಿದೆ.

ಈ ಹಿನ್ನೆಲೆಯಲ್ಲಿ, ರಾಜ್ಯದಲ್ಲಿ ಕಳೆದ ಎರಡು ದಶಕಗಳಿಂದ ಅನುಷ್ಠಾನಗೊಳ್ಳುತ್ತಿರುವ ಈ ನವ ಉದಾರೀಕರಣದ ನೀತಿಗಳ ಪರಿಣಾಮಗಳನ್ನು ಗುರುತಿಸುವ ಆರಂಭದ ಒಂದು ಪ್ರಯತ್ನವನ್ನು ನಮ್ಮ 'ಜನಶಕ್ತಿ' ಕನ್ನಡ ವಾರಪತ್ರಿಕೆ ಈ ವಿಶೇಷ ಸಂಚಿಕೆಯ ಮೂಲಕ ಮಾಡಲಾಗಿದೆ. ಪತ್ರಿಕೆಗೆ ಪ್ರೋತ್ಸಾಹ ನೀಡಿದ ಜಾಹಿರಾತುದಾರರಿಗೆ, ಲೇಖನಗಳನ್ನು ನೀಡಿದ ಬರಹಗಾರರಿಗೆ, ವಿಶೇಷ ಸಂಚಿಕೆಯನ್ನು ಹೊರತರಲು ಶ್ರಮಿಸಿದ ಎಸ್.ವೈ. ಗುರುಶಾಂತ್, ಆರ್. ರಾಮಕೃಷ್ಣ, ಎಚ್.ಎಂ. ನಾಗರಾಜು, ರಾಮು, ಅರ್ಥಪೂರ್ಣವಾದ ಮುಖಪುಟವನ್ನು ರಚಿಸಿಕೊಟ್ಟ ಕ್ರಿಯಾ ಪ್ರಕಾಶನದ ರಾಮು ಎಂ, ಆಕರ್ಷಕವಾಗಿ ವಿನ್ಯಾಸಗೊಳಿಸಿದ ಕೆ. ಅಂಬಿಕ ಮತ್ತು ಅಂದವಾಗಿ ಮುದ್ರಿಸಿಕೊಟ್ಟ ಕ್ರಿಯಾ ಪ್ರಕಾಶನದ ವ್ಯವಸ್ಥಾಪಕರಾದ ಜಿ. ಚಂದ್ರಶೇಖರ್ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ವಂದನೆಗಳು.

ನಿತ್ಯಾನಂದಸ್ವಾಮಿ



ಭೂಮಿ ತಾಯಿಯ ಚೊಚಲಮಗ

ದ.ರಾ. ಬೇಂದ್ರೆ

ಭೂಮಿ ತಾಯಿಯಾ
ಚೊಚ್ಚಲ ಮಗನನು
ಕಣ್ತೆರೆದೊಮ್ಮೆ
ನೋಡಿಹರೇನು?

ಮುಗಿಲೆಂಬುವದು
ಕಿಸಿದಿತು ಹಲ್ಲು!
ಬಂದಾ ಬೆಳೆಯು
ಮಿಡಿಚಿಯ ಮೇವು:
ಬಿತ್ತಿದ್ದಾಯಿತು
ಉತ್ತಿಹ ಮಣ್ಣು!

ದಿನವೂ ಸಂಜೆಗೆ
ಬೆವರಿನ ಜಳಕ,
ಉಸಿರಿನ ಕೂಳಿಗೆ
ಕಂಬನಿ ನೀರು!

ಹೊಟ್ಟೆಯು ಹತ್ತಿತು
ಬೆನ್ನಿನ ಬೆನ್ನು!
ಎದೆಯ ಗೂಡಿನೊಳು
ಚಿಂತೆಯ ಗೂಗಿ!

ಮಿದುಳಿನ ಮೂಲೆಗೆ
ಲೊಟ ಲೊಟ ಹಲ್ಲಿ
ಮೋರೆಯು ಸಾವನು
ಅಣಕಿಸುತಿಹುದು
ಕೊರಳಿಗೆ ಹತ್ತಿದೆ
ಸಾಲದ ಶೂಲ!

ಆದರು ಬರದೋ
ಯಮನಿಗೆ ಕರುಣ
ಉಸಿರಿಗೆ ಒಮ್ಮೆ
ಜನನಾ ಮರಣ
ನರಗಳ ನೂಲಿನ
ಪರೆಪರೆ ಚೀಲಾ
ತೆರೆ ತೆರೆಯಾಗಿದೆ
ಜಿರಿಜಿರಿಯಾಗಿದೆ;

ಅದರೊಳಗೊಂದು
ಎಲುವಿನ ಬಲೆಯು
ಟುಕು ಟುಕು ಡುಗು ಡುಗು
ಉಲಿಯುವ ನರಳುವ
ಜೀವದ ಜಂತು
ಹೊರಳುತ ಹೊರಳುತ;

ಜನುಮವೆಂಬುವಾ
ಕತ್ತಲೆಯಲ್ಲಿ
ಬಿದ್ದಿದೆ ಒಳಗೆ
ಹೇಗೋ ಬಂದು!
ಸಾವಿನ ಬೆಳಕದು
ಕಾಣುವುದೆಂದು?



ಜಾಗತೀಕರಣ ಯುಗ ಮತ್ತು ಕೃಷಿ ರಂಗದ ಬಿಕ್ಕಟ್ಟಿನ ತೀವ್ರತೆ

ಜಯ

ಕಳೆದೆರಡು ದಶಕಗಳ ನವ ಉದಾರೀಕರಣ ಯುಗದಲ್ಲಿ ಕರ್ನಾಟಕದ ಕೃಷಿ ರಂಗ ಶವಾಗಾರದತ್ತ ತೆವಳುತ್ತಿದೆ. ಅದರ ಶವ ಪೆಟ್ಟಿಗೆಗೆ ಅಂತಿಮ ಮೊಳೆ ಹೊಡೆಯುವುದಕ್ಕಾಗಿ ಅತಿ ಕಾತುರತೆಯಿಂದ ಆಳುವ ವರ್ಗದ ಪ್ರತಿನಿಧಿಗಳಾದ ಕಾಂಗ್ರೆಸ್ ಮತ್ತು ಬಿಜೆ ಸರ್ಕಾರಗಳು ನಾ ಮುಂದು ತಾ ಮುಂದು ಎಂಬಂತೆ ಪೈಪೋಟಿ ಮಾಡುತ್ತಿವೆ. ಜಾಗತೀಕರಣದ ಸುತ್ತಿಗೆ, ಸಲಾಕೆಗಳನ್ನು ಹಿಡಿದು ರೈತ-ವಿರೋಧಿ ನೀತಿಗಳನ್ನು ಜಾರಿಗೆ ತರುತ್ತಾ ಬಂದಿವೆ. ದೊಡ್ಡ ಬಂಡವಾಳಶಾಹಿ ಪರವಾದ ಖಾಸಗೀಕರಣ ಮತ್ತು ಮಾರುಕಟ್ಟೆ ಶಕ್ತಿಗಳು ಎಬ್ಬಿಸಿರುವ ಬಿರುಗಾಳಿಯಲ್ಲಿ ಬದುಕು ಕಟ್ಟಿಕೊಳ್ಳಲಾಗದೆ ಅತಂತ್ರಗೊಂಡು ಆತ್ಮಹತ್ಯೆಗೆ ಶರಣಾಗುತ್ತಿರುವ ರೈತಾ ಜನಕ್ಕೆ ಸರ್ಕಾರದಿಂದ ಪರಿಹಾರ ರೂಪದಲ್ಲಿ ಲಭ್ಯವಾಗುತ್ತಿರುವುದು ಶವಸಂಸ್ಕಾರದ ವೆಚ್ಚ ಮಾತ್ರ!

2011-12 ನೇ ಸಾಲಿನಲ್ಲಿ ಸರ್ಕಾರವೇ ಹೇಳುವಂತೆ ಕೃಷಿ ಬೆಳವಣಿಗೆ ದರ ಶೇ.2.9. ಅಂದರೆ ಕೃಷಿ ರಂಗವು ಬೆಳವಣಿಗೆಯೇ ಕಾಣದೆ ಪಾತಾಳ ತಲು ಹಿಂಜರಿತ ಕಂಡಿದೆ.

ಆತ್ಮಹತ್ಯೆಗಳ 'ಪ್ರಗತಿ'!

ನವ-ಉದಾರೀಕರಣ ನೀತಿಯ ಹೊಡೆತಕ್ಕೆ ಸಿಕ್ಕಿ 1995-2010ರ ನಡುವಿನ 16 ವರ್ಷಗಳ ಅವಧಿಯಲ್ಲಿ ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ ವರದಿ ಪ್ರಕಾರ 2,56,913 ರೈತರು ದೇಶದಾದ್ಯಂತ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕರ್ನಾಟಕದಲ್ಲೂ ಕೂಡ ಪ್ರತಿ ತಿಂಗಳಿಗೆ ಸರಾಸರಿ 25 ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. 2004 ರಿಂದ 2012 ರವರೆಗಿನ 10 ವರ್ಷಗಳ ಅವಧಿಯಲ್ಲಿ ರಾಜ್ಯದಲ್ಲಿ 2,909 ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಇದು ಕೃಷಿ ರಂಗದ ಬಿಕ್ಕಟ್ಟಿನ ಭೀಕರತೆಯನ್ನು ಎತ್ತಿ ತೋರಿಸುತ್ತದೆ.

ವರ್ಷ	ದಾಖಲಾಗಿರುವ ರೈತರ ಆತ್ಮಹತ್ಯೆ ಸಂಖ್ಯೆ
2003-04	708
2004-05	271
2005-06	163
2006-07	346
2007-08	342
2008-09	337
2009-10	290
2010-11	242
2011-12	187
2012-13 (ಜುಲೈವರೆಗೆ)	23

ರಾಜ್ಯದಲ್ಲಿ ಸಂಭವಿಸುತ್ತಿರುವ ರೈತರ ಆತ್ಮಹತ್ಯೆಗಳಲ್ಲಿ ಮುಂಚೂಣಿಯಲ್ಲಿರುವ ಜಿಲ್ಲೆಗಳೆಂದರೆ: ಹಾಸನ (309), ಬೀದರ್ (220), ಚಿಕ್ಕಬಳ್ಳಾಪುರ (213), ಬೆಳಗಾಂ (205) ಮತ್ತು ಚಿತ್ರದುರ್ಗ (193). ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಇವೆಲ್ಲ ಸರ್ಕಾರಿ ಅಂಕಿ ಅಂಶಗಳಾಗಿದ್ದು, ದಾಖಲಾದ ಆತ್ಮಹತ್ಯೆಗಳನ್ನು ಮಾತ್ರವೇ ಬಿಂಬಿಸುತ್ತವೆ. ದಾಖಲಾಗದ ಆತ್ಮಹತ್ಯೆಗಳು ಹಲವು, ಆದರೆ ಕೃಷಿ ಬಿಕ್ಕಟ್ಟಿನ ಪರಿಣಾಮದಿಂದ ಇತರೆ ಒತ್ತಡ ಮತ್ತು ರೋಗರುಜಿನಗಳಿಗೆ ಚಿಕಿತ್ಸೆ ಸರಿಯಾಗಿ ಸಿಗದೆ ಸಾಯುವ ಘಟನೆಗಳನ್ನು ಇವು ಬಿಂಬಿಸುವುದಿಲ್ಲ.


ಕೃಷಿ ಬಿಕ್ಕಟ್ಟಿನ ಮೂಲ:

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಾರಿಗೊಳಿಸುತ್ತಿರುವ ವಿಶ್ವಬ್ಯಾಂಕ್, ಡಬ್ಲ್ಯೂ.ಟಿ.ಓ ಮತ್ತು ಐ.ಎಂ.ಎಫ್ ತ್ರಿಮೂರ್ತಿಗಳ ನಿರ್ದೇಶಿತ ಆರ್ಥಿಕ ನೀತಿಗಳು ರೈತರನ್ನು ದಿವಾಳಿ ಮಾಡುತ್ತಿವೆ. ಕೇಂದ್ರ ಸರ್ಕಾರವೇ ರಚಿಸಿದ ಡಾ: ಸ್ವಾಮಿನಾಥನ್ ನೇತೃತ್ವದ ರೈತರ ಆಯೋಗವು ಕೃಷಿ ಬಿಕ್ಕಟ್ಟಿನ ಕುರಿತು ಅಧ್ಯಯನ ನಡೆಸಿ ಬಿಕ್ಕಟ್ಟಿನ ಕಾರಣಗಳನ್ನು ಗುರುತಿಸಿತು. ಕಡಿಮೆ ಬಡ್ಡಿಯಲ್ಲಿ ರೈತರಿಗೆ ಸೂಕ್ತ ಸಾಂಸ್ಥಿಕ ಸಾಲ ಸೌಲಭ್ಯ ಇಲ್ಲದಿರುವುದು, ಹೆಚ್ಚಳಗೊಂಡಿರುವ ಕೃಷಿ ಪರಿಕರಗಳ ಬೆಲೆ, ರಸಗೊಬ್ಬರ ಬೆಲೆಯೇರಿಕೆ,



ಬೆಳೆದ ಬೆಳೆಗೆ ವೈಜಾನಿಕ ಬೆಂಬಲ ಬೆಲೆ ಇಲ್ಲದಿರುವುದು, ಇತ್ಯಾದಿ ಕಾರಣಗಳನ್ನು ಗುರುತಿಸಿತು. ಆದರೆ ಡಾ.ಸ್ವಾಮಿನಾಥನ್ ಆಯೋಗವು ಈ ಸಮಸ್ಯೆಗಳನ್ನು ಪರಿಹರಿಸಲು ಮತ್ತು ದೋಷಪೂರಿತ ನೀತಿಗಳನ್ನು ಸರಿಪಡಿಸಲು ಸೂಚಿಸಿತು. ಇದರ ಜೊತೆಗೆ ಸರಿಯಾದ ಬೆಳೆ ವಿಮೆ, ಕೃಷಿ ಉತ್ಪನ್ನಗಳ ಮೇಲೆ ನಡೆಯುತ್ತಿರುವ ಜೂಜುಕೋರತನದ ಮುಂಗಡ ವಾಯಿದೆ ವ್ಯಾಪಾರವನ್ನು ರದ್ದುಪಡಿಸಲು, ಕೃಷಿ ರಂಗದ ಬಿಕ್ಕಟ್ಟನ್ನು ಪರಿಹರಿಸಲು ಕೇವಲ ಪ್ಯಾಕೇಜ್ ಘೋಷಿಸುವ ಬದಲು ಕೃಷಿರಂಗವನ್ನು ಬಿಕ್ಕಟ್ಟಿನಿಂದ ಆಚೆ ತರಲು ಆಮೂಲಾಗ್ರ ನೀತಿಗಳನ್ನು ಪರಿಶೀಲಿಸಲು ಎಡಪಕ್ಷಗಳು ಒತ್ತಾಯಿಸಿ ಹೋರಾಟ ನಡೆಸಿದವು. ಆದರೆ ಕೇಂದ್ರ ಸರ್ಕಾರ ಈ ಯಾವುದೇ ಶಿಫಾರಸು ಅನುಷ್ಠಾನಗೊಳಿಸಲು ಮುಂದಾಗಿಲ್ಲ.

ರೈತರ ಬೆಳೆಗಳಿಗೆ ಸೂಕ್ತ ಬೆಂಬಲ ಬೆಲೆ ಘೋಷಿಸಿ ಸರ್ಕಾರವೇ ಕೃಷಿ ಉತ್ಪನ್ನಗಳನ್ನು ಖರೀದಿಸಿ ಸಾರ್ವಜನಿಕ ಪಡಿತರ ವ್ಯವಸ್ಥೆ ಬಲಪಡಿಸಲು ಅದನ್ನು ಉಪಯೋಗಿಸಿಕೊಳ್ಳುವಂತೆ ಒತ್ತಾಯಿಸಲಾಯಿತು.



ಆದರೆ ಕೇಂದ್ರ ಸರ್ಕಾರ ಕೇವಲ ಕೆಲವು ಪ್ರದೇಶಗಳಿಗೆ ಪ್ಯಾಕೇಜ್ ಘೋಷಿಸಿ ಸುಮ್ಮನಾಯಿತು. ಕಳೆದ 20 ವರ್ಷಗಳಲ್ಲಿ ಕೇವಲ ಒಂದು ಬಾರಿ ಮಾತ್ರ ರೂ. 60,000 ಕೋಟಿ ಸಾಲ ಮನ್ನಾ ಮಾಡಿದ್ದನ್ನೇ ಮಾಧ್ಯಮಗಳು ರೈತರಿಗೆ 'ಜಾಕ್‌ಪಾಟ್' ಹೊಡೆಯಿತೆಂಬಂತೆ ಚಿತ್ರಿಸಿದವು. ಆದರೆ ಕಾರ್ಪೊರೇಟ್ ಕಂಪನಿಗಳು ಅದೇ ಅವಧಿಯಲ್ಲಿ ನೀಡಿರುವ ತೆರಿಗೆ ವಿನಾಯಿತಿ, ಸಹಾಯಧನ, ತೆರಿಗೆ ವಸೂಲಿ ಮಾಡದೆ ಇರುವುದು, ಎಲ್ಲವನ್ನೂ ಅಂದಾಜು ಮಾಡಿದರೆ ಅದು ರೂ.30,00,000 ಕೋಟಿ(ಮೂವತ್ತು ಲಕ್ಷ ಕೋಟಿ)ಯನ್ನು ಮೀರುತ್ತದೆ. ಅಲ್ಲದೆ ಕೇಂದ್ರ ಸರ್ಕಾರ ಘೋಷಿಸಿದ ಸಾಲ ಮನ್ನಾ ಯೋಜನೆಯಲ್ಲಿ ರೂ.15,000 ಕೋಟಿಯಷ್ಟು ಮೊತ್ತದಲ್ಲಿ ಉದ್ದೇಶಿತ ಫಲಾನುಭವಿಗಳಿಗೆ ತಲು ಲ್ಲ ಎಂದು ಮಹಾಲೇಖಪಾಲರ ವರದಿ ಟೀಕಿಸಿದೆ.

ಜೀವ ಬಿಡುತ್ತಿರುವ ರೈತಾ ಒಂದೆಡೆಯಾದರೆ ಆಳುವ ವರ್ಗದ ಕಾರ್ಯಸೂಚಿ ಮತ್ತೊಂದು. ಭಾರತ-ಅಮೇರಿಕಾ ಕೃಷಿ ಒಡಂಬಡಿಕೆ ಮಾಡಿಕೊಂಡು ಬಹುರಾಷ್ಟ್ರೀಯ ಕಂಪನಿಗಳಾದ ಮಾನ್ಸಾಂಟೋ, ಡ್ಯುಪಾಂಟ್, ಬೇಯರ್, ಪೆಪ್ಸಿಕೋ, ಕಾರ್ಗಿಲ್, ಸಬ್ ಮಿಲ್ಲರ್, ಲು ನ್ ಇತ್ಯಾದಿ ಕಂಪನಿಗಳು ಕೃಷಿಯಲ್ಲಿ ವ್ಯಾಪಾರ ಮಾಡಲು ಅನುಮತಿ ನೀಡಲಾಗುತ್ತಿದೆ. ವಾಲ್‌ಮಾರ್ಟ್‌ನಂತಹ ದೈತ್ಯ ಬಹುರಾಷ್ಟ್ರೀಯ ಕಂಪನಿಗೆ ಚಿಲ್ಲರೆ ಮಾರಾಟ ಕ್ಷೇತ್ರವನ್ನು ತೆರೆದಿಡಲಾಗಿದೆ. ಇದು 4 ಕೋಟಿಗೂ ಹೆಚ್ಚು ಚಿಲ್ಲರೆ ಮಾರಾಟಗಾರರನ್ನು ಬೀದಿಗೆ ತಳ್ಳುವುದಷ್ಟೇ ಅಲ್ಲ, ಕೋಟ್ಯಾಂತರ ರೈತಾ ವರ್ಗ ಇಂತಹ ಕಂಪನಿ ಮೇಲೆ ಅವಲಂಬಿತರಾಗಿ ಗುಲಾಮರಾಗಬೇಕಾಗುತ್ತದೆ. ಜೈವಿಕ ತಂತ್ರಜಾನವನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿರುವ ಬಹುರಾಷ್ಟ್ರೀಯ ಕಂಪನಿಗಳು ಭಾರತದಲ್ಲಿ ಬೃಹತ್ ಕೃಷಿ ಕೈಗಾರಿಕಾ ಉದ್ಯಮಗಳನ್ನು ಸಾವಿರಾರು ಎಕರೆಗಳ ಬೃಹತ್ ಕೃಷಿ ಫಾರಂಗಳನ್ನು ಸ್ಥಾ ಸುವ ಮೂಲಕ ಭಾರತದ 120 ಕೋಟಿ ಜನರ ಬೃಹತ್ ಮಾರುಕಟ್ಟೆಯಿಂದ ಬೃಹತ್ ಲಾಭ ಪಡೆಯುವ ಕನಸು ಕಾಣುತ್ತಿದ್ದಾರೆ. ಇದರ ಭಾಗವಾಗಿ ಭಾರತದಲ್ಲಿ ಈ 50 ವರ್ಷಗಳಲ್ಲಿ ಸ್ಥಾ ಸಲಾಗಿರುವ ವಿಸ್ತಾರವಾದ ಕೃಷಿ ಸಂಶೋಧನಾ ವ್ಯವಸ್ಥೆಯ ಮೇಲೆ ಹಿಡಿತ ಸ್ಥಾ ಸಲು, ತನ್ನ ವಶಕ್ಕೆ ತೆಗೆದುಕೊಳ್ಳಲು ಪ್ರಯತ್ನಿಸುತ್ತಿದೆ.

ಬಹುರಾಷ್ಟ್ರೀಯ ಕಂಪನಿಗಳು ಗುತ್ತಿಗೆ ಕೃಷಿ ನಡೆಸಲು ಅನುಮತಿ ನೀಡಲಾಗುತ್ತಿದೆ. ರೈತ ತನ್ನ ಭೂಮಿಯಲ್ಲಿ ಕಂಪನಿಗಳು ನೀಡುವ ಬೀಜ ಬಳಸಿ, ಕಂಪನಿಗಳು ಬಯಸುವ ರಫ್ತು-ಆಧಾರಿತ ಬೆಳೆಗಳನ್ನು ಬೆಳೆದು, ಕಂಪನಿ ನಿಗದಿಪಡಿಸುವ ಬೆಲೆ ಪಡೆಯುವ ದಯನೀಯ ಸ್ಥಿತಿ ತಲುಪುತ್ತಿದ್ದಾನೆ. ರಫ್ತು-ಆಧಾರಿತ ಬೆಳೆಗಳಿಗೆ ಒತ್ತು ಕೊಡುವುದರಿಂದ ದೇಶದ ಆಹಾರ ಭದ್ರತೆಗೆ ಪೆಟ್ಟು ಬೀಳುವುದು ಖಚಿತ. ಮತ್ತೊಂದೆಡೆ, ರೈತ ತನ್ನ ಭೂಮಿಯಲ್ಲಿ ತಾನೇ ಕೂಲಿಕಾರನಾಗಿ ಬದುಕು ಸವೆಸುವ ದಿನಗಳು ಬರುತ್ತಿವೆ.

ಕೃಷಿಯ ಖಾಸಗೀಕರಣಕ್ಕಾಗಿ ದೂರ ದೃಷ್ಟಿ 2020

ದೂರದೃಷ್ಟಿ-2020 ಯೋಜನೆ ಬಿಜೆ ಸರ್ಕಾರ ರೈತರನ್ನು ಒಕ್ಕಲೆಬ್ಬಿಸಲು ಸಹಕಾರಿಯಾಗುತ್ತದಷ್ಟೆ. ಅದರ ಕೆಲವು ಪ್ರಮುಖ ಅಂಶಗಳು ಹೀಗಿವೆ:

(1 ಕೃಷಿಯಲ್ಲಿ ತೊಡಗಿರುವ ದುಡಿಯುವ ಜನಗಳನ್ನು ಇಂದಿನ ಶೇ. 61 ರಿಂದ 2022ರ ವೇಳೆಗೆ ಶೇ 35-40ಕ್ಕೆ ಇಳಿಸುವುದು. ಅಂದರೆ ಒಟ್ಟಿನಲ್ಲಿ 60-70ಲಕ್ಷ ಜನರನ್ನು ಕೃಷಿಯಿಂದ ಬಿಡಿಸಿ ಕೃಷಿಯೇತರ ಕೆಲಸಗಳಲ್ಲಿ ತೊಡಗಿಸುವುದು. ಪ್ರತಿವರ್ಷ ಸುಮಾರು 4 ರಿಂದ 5 ಲಕ್ಷ ಕೃಷಿಯಲ್ಲಿ ತೊಡಗಿರುವ

ದುಡಿಯುವ ಜನಗಳನ್ನು ಹೀಗೆ ವರ್ಗಾಯಿಸಬೇಕಾಗಿದೆ.

(2) ಅದಕ್ಕಾಗಿ ದೊಡ್ಡ ಪ್ರಮಾಣದಲ್ಲಿ ಕೈಗಾರಿಕೆಗಳಿಗೆ, ಸೇವೆಗಳಿಗೆ ಹಾಗೂ ಕೃಷಿ ಕ್ಷೇತ್ರಕ್ಕೆ ಬಂಡವಾಳವನ್ನು ಆಕರ್ಷಿಸಬೇಕು.

(3) ಅದಕ್ಕಾಗಿ ಬೃಹತ್ ಪ್ರಮಾಣದಲ್ಲಿ ಮೂಲಭೂತ ಸೌಕರ್ಯಗಳನ್ನು ನಿರ್ಮಿಸಬೇಕು. ನೀರು, ವಿದ್ಯುತ್, ರಸ್ತೆ, ರೈಲ್ವೆ, ವಿಮಾನ ನಿಲ್ದಾಣಗಳು, ಇತ್ಯಾದಿಗಳಿಗಾಗಿ ದೊಡ್ಡ ಪ್ರಮಾಣದ ಬಂಡವಾಳ ಬೇಕು.

(4) ಕೃಷಿಯಲ್ಲಿ ಮಾರುಕಟ್ಟೆ, ಶೀಥಲೀಕರಣ, ಸಂಸ್ಕರಣ ಮೊದಲಾದ ಮೌಲ್ಯವರ್ಧಿತ ಕೃಷಿ ಉತ್ಪನ್ನಗಳಿಗೆ ಪ್ರೋತ್ಸಾಹ ನೀಡಬೇಕು.

(5) ಇದಕ್ಕಾಗಿ ಭೂಮಿ ಪಡೆದುಕೊಳ್ಳಲು ಕರ್ನಾಟಕ ಭೂಸುಧಾರಣಾ ಕಾನೂನಿನ ನಿಯಮ 79 ಎ, 79 ಬಿ ಗಳನ್ನು ತಿದ್ದುಪಡಿ ಮಾಡಬೇಕು.

ವರ್ಷ	1970–71	1980–81	1990–91	2000–01	2005–06
ಅತಿ ಸಣ್ಣ ರೈತರು	10,81,000	14,89,000	22,62,000	32,52,000	36,55,000
ಸಣ್ಣ ರೈತರು	8,40,000	10,57,000	15,86,000	19,09,000	20,14,000
ಕೆಳ ಮಧ್ಯಮ	7,88,000	9,18,000	11,63,000	12,59,000	12,78,000
ಮಧ್ಯಮ ರೈತರು	6,23,000	6,62,000	6,36,000	5,69,000	5,55,000
ಶ್ರೀಮಂತ ರೈತರು	2,19,000	1,83,000	1,29,000	90,000	79,000
ಒಟ್ಟು	35,51,000	43,09,000	57,76,000	70,79,000	75,81,000


<u>ಎ. .ಎಂ.ಸಿ ಕಾನೂನು ತಿದ್ದುಪಡಿ</u>

ಬಿಜೆ ಅಧಿಕಾರಕ್ಕೆ ಬಂದಾಕ್ಷಣ ಎ. .ಎಂ.ಸಿ. ಕಾನೂನಿಗೆ ತಿದ್ದುಪಡಿ ಅಂಗೀಕರಿಸಿತು. ಬೃಹತ್ ಬಹುರಾಷ್ಟ್ರೀಯ ಕಂಪನಿಗಳಿಗೆ ಕೃಷಿ ಮಾರುಕಟ್ಟೆ ಅಂಗಣದಲ್ಲಿಯೇ ಮಾರುಕಟ್ಟೆ ಅಧಿಕಾರಿಗಳ ಕಣ್ಗಾವಲಿನಲ್ಲಿ ಉತ್ಪನ್ನಗಳ ಮಾರಾಟ ಕೊಳ್ಳುವಿಕೆ ನಡೆಯಬೇಕು ಎಂಬ ನಿಯಮವನ್ನು ಮುರಿದು, ಹಳ್ಳಿಗಳಲ್ಲಿಯೇ ನೇರವಾಗಿ ಕೊಳ್ಳಬಹುದು. ರೈತರೊಂದಿಗೆ ಕರಾರು (ಕಂಟ್ರಾಕ್ಟ್) ಮಾಡಿಕೊಳ್ಳಬಹುದು ಎಂಬ ಕಲಂಗಳನ್ನು ಅದರಲ್ಲಿ ಸೇರಿಸಲಾಗಿದೆ. ಆ ಮೂಲಕ ತೋರಿಕೆಗೆ ರೈತ ತನ್ನ ಭೂಮಿಗೆ ಒಡೆಯನಾಗಿರುವಾಗಲೇ ಬೃಹತ್ ಕಂಪನಿಗಳ ಕರಾರುದಾರನಾಗಿ, ಹೊಸ ರೀತಿಯ ಹಾಗೂ ಇನ್ನಷ್ಟು ಅಪಾಯಕಾರಿಯಾದ ಗೇಣಿದಾರಿಕೆಯನ್ನು ಹುಟ್ಟು ಹಾಕಲಾಗುತ್ತಿದೆ. ಹೀಗೆ ಭೂ ಸುಧಾರಣೆ ಕಾನೂನನ್ನೂ ತಿದ್ದುಪಡಿ ಮಾಡದೆಯೆ ಭೂ ಸಂಬಂಧಗಳನ್ನು ತಿರುಚಲಾಗಿದೆ.

ಭೂ ಸುಧಾರಣೆ ನಿಯಮಗಳ ತಿದ್ದುಪಡಿ ಮೂಲಕ ಕಂಪನಿಗಳಿಗೆ ಭೂಮಿ ಕಿತ್ತುಕೊಡುತ್ತಿರುವ ಬಿಜೆ ನೀತಿ

ಭೂ ಸುಧಾರಣೆಗಾಗಿ ನಡೆದ ಚಳುವಳಿ ಮತ್ತು ನಂತರ ಬಂದ ಕಾನೂನಿನ ಮುಖ್ಯ ಉದ್ದೇಶ ಪಾಳೆಯಗಾರಿ ಭೂಮಾಲಿಕರ ಬಳಿ ಹಾಗೂ ಮಧ್ಯವರ್ತಿಗಳ ಬಳಿ ಸೇರಿಕೊಂಡ ಭೂಮಿಯನ್ನು ವಶಪಡಿಸಿಕೊಳ್ಳುವುದು ಮತ್ತು ಹಂಚುವುದು. ಅದಕ್ಕಾಗಿ ಭೂ ಮಿತಿ ಕಾಯಿದೆ, ಉಳುವವನನ್ನೆ ಹೊಲದೊಡೆಯನನ್ನಾಗಿ ಮಾಡುವುದು, ಅದಕ್ಕಾಗಿ ಗೇಣಿದಾರರಿಗೆ ಭೂಮಿಯ ಹಕ್ಕು ನೀಡುವ ಕಾಯಿದೆ ಮತ್ತು ಮೂರನೆಯ ಹೆಚ್ಚು ಗಮನ ಸೆಳೆಯದ ಭಾಗ–ಹೀಗೆ ನೀಡಿದ ಭೂಮಿ ಮತ್ತೆ ಪಟ್ಟಭದ್ರ ಹಿತಗಳ ಪಾಲಾಗದಿರಲು ಕೃಷಿ ಭೂಮಿಯನ್ನು ಕೃಷಿಯೇತರ ವ್ಯವಹಾರ ಹಾಗೂ ಉದ್ದಿಮೆಗಳಲ್ಲಿ ತೊಡಗಿರುವವರು ಹಣದ ಸೊಕ್ಕಿನಲ್ಲಿ ಮೆರೆಯುವವರು ಮರಳಿ ವಶಪಡಿಸಿಕೊಳ್ಳಲಾಗದಂತೆ ರಕ್ಷಣೆ.

ಕರ್ನಾಟಕ ಸರ್ಕಾರ ಈಗ ಈ ರಕ್ಷಣೆಯ ಕೋಟೆಯನ್ನು ಒಡೆದುಹಾಕಲು ರೈತನ ಭೂಮಿಗೆ ಹಣವುಳ್ಳವರು ಯಾರು ಬೇಕಾದರೂ ನುಗ್ಗಿ ವಶಪಡಿಸಿಕೊಳ್ಳಲು ಭೂಸುಧಾರಣಾ ಕಾಯ್ದೆ ಕಲಂ 79ಎ, ಬಿ ಹಾಗೂ 109 ಅನ್ನು ತಿದ್ದುಪಡಿ ಮಾಡಲು ಯತ್ನಿಸುತ್ತಿದೆ. ಬಗರ್ ಹುಕುಂ ಸಾಗುವಳಿದಾರರನ್ನು ವ್ಯವಸ್ಥಿತ ತೂರಿ ಮಾಡಿ ಒಕ್ಕಲೆಬ್ಬಿಸಲಾಗುತ್ತಿದೆ.



ಜೇವರ್ಗಿ : ವಿಷ ಕುಡಿದು ಕುಸಿದು ಬಿದ್ದಿರುವ ತೊಗರಿ ರೈತರು

ಭೂ ಸುಧಾರಣೆಗೆ ನಿಯಮಗಳ ತಿದ್ದುಪಡಿ

ಭೂ ಸುಧಾರಣಾ ಕಾನೂನಿನ ಪ್ರಮುಖ ಅಂಶಗಳಲ್ಲಿ ಭೂಮಿತಿ ಕಾನೂನಿನ ಅಡಿಯಲ್ಲಿ ರಾಜ್ಯದಲ್ಲಿ ಸಾಗುವಳಿಯಲ್ಲಿರುವ ಸುಮಾರು 2.50 ಕೋಟಿ ಎಕರೆ ಹೆಚ್ಚುವರಿ ಭೂಮಿಯಲ್ಲಿ ಕೇವಲ ಒಂದು ಲಕ್ಷ ಎಕರೆಯನ್ನು ಸುಮಾರು 25,000 ಜನರಿಗೆ ವಿತರಿಸಲಾಗಿದೆ. ಇದು ರಾಜ್ಯದ ಕೃಷಿ ಭೂಮಿಯ ಕೇವಲ ಶೇ 0.4 ಭಾಗ ಮಾತ್ರ. (ಕರ್ನಾಟಕಕ್ಕಿಂತ ಕಡಿಮೆ ಸಾಗುವಳಿ ಭೂಮಿ ಇರುವ ಪ.ಬಂಗಾಳದಲ್ಲಿ 10.88 ಲಕ್ಷ ಎಕರೆಯನ್ನು 28 ಲಕ್ಷಕ್ಕೂ ಹೆಚ್ಚು ಕುಟುಂಬಗಳಿಗೆ ನೀಡಲಾಗಿದೆ).

ಭೂಹಿಡುವಳಿ ಹೊಂದಿರುವ ರೈತಾ ವರ್ಗದ ಬದಲಾಗುತ್ತಿರುವ ಚಿತ್ರಣ

ರೈತರ ಭೂಮಿ ಶ್ರೀಮಂತರಿಗೆ ಪರಭಾರೆಯಾಗದಂತೆ ರಕ್ಷಿಸಲು

ವರ್ಷ	1999–00	2001–02	2004–05	2007–08	2008–09
ರಾಜ್ಯದ ಒಟ್ಟಾರೆ ಉತ್ಪನ್ನಕ್ಕೆ ಕೃಷಿಯ ಶೇಕಡಾವಾರು ಕೊಡುಗೆ	28.6	22.9	17.6	15.4	13.8

ರೈತ ಚಳುವಳಿಗಳ ಒತ್ತಾಯದ ಮೇರೆಗೆ ರಕ್ಷಣಾತ್ಮಕ ನಿಯಮಗಳನ್ನು ಅಳವಡಿಸಲಾಯಿತು. ಅದರಂತೆ ಕೃಷಿಕರಲ್ಲದವರು ಯಾರು ಕೃಷಿ ಭೂಮಿಯನ್ನು ಕೊಳ್ಳುವಂತೆಯೇ ಇಲ್ಲ. ಕೃಷಿಕರು ಕೂಡ ಒಂದು ವರ್ಷಕ್ಕೆ ಎರಡು ಲಕ್ಷಕ್ಕಿಂತ ಹೆಚ್ಚು ಕೃಷಿಯೇತರ ಆದಾಯವನ್ನು ಹೊಂದಿದ್ದರೆ ಕೃಷಿಕರು ಕೂಡ ಕೃಷಿ ಭೂಮಿಯನ್ನು ಕೊಳ್ಳುವಂತಿಲ್ಲ. ಶಿಕ್ಷಣ ಸಂಸ್ಥೆ, ವಾಣಿಜ್ಯ ಸಂಸ್ಥೆ, ಧಾರ್ಮಿಕ ಸಂಸ್ಥೆಗಳು, ಟ್ರಸ್ಟ್‌ಗಳು ಯಾವುವೂ, ಕೃಷಿ ಸಹಕಾರ ಸಂಘಗಳು ಕೂಡ ಕೃಷಿ ಭೂಮಿಯನ್ನು ಕೊಳ್ಳುವಂತಿಲ್ಲ. ಹೀಗೆ ಬಿಗಿಯಾದ ರಕ್ಷಣೆ ನೀಡಲಾಗಿತ್ತಾದರೂ ಪ್ರತಿ ವ್ಯಾರಾಟದ ನೋಂದಾವಣೆಯಲ್ಲಿ ಕೊಳ್ಳುವವನ ಪಹಣಿಯನ್ನು ಮಾತ್ರ ಕೇಳಲಾಗುತ್ತದೆ. ಕೃಷಿಯೇತರ ಆದಾಯವನ್ನು ಸರಿಯಾಗಿ ಪರಿಗಣಿಸದಿರುವುದರಿಂದ ಅರ್ಧ ಎಕರೆ ಕೃಷಿ ಭೂಮಿಯ ಪಹಣಿಯನ್ನು ಪಡೆದುಕೊಂಡರೆ ಸಾಕು ಎಷ್ಟು ಕೃಷಿ ಭೂಮಿಯನ್ನಾದರೂ ಕೊಳ್ಳಬಹುದು ಎಂಬಂತೆ ವ್ಯವಹರಿಸಲಾಗುತ್ತಿತ್ತು. ಹೀಗೆ ಕೃಷಿಯಲ್ಲಿ ತೊಡಗಿದ ಅಥವಾ ಕೃಷಿ ಭೂಮಿಯ ಪಹಣಿ ತೋರಿಸಲಾಗದವರು, ಮುಖ್ಯವಾಗಿ ಕಂಪನಿಗಳು ಕೃಷಿ ಭೂಮಿಯನ್ನು ಕೊಳ್ಳಲು ಅವಕಾಶವಿರಲಿಲ್ಲ. ಅಷ್ಟರ ಮಟ್ಟಿಗೆ ಕೈಗಾರಿಕೆಗಳು, ಶಿಕ್ಷಣ, ಆರೋಗ್ಯ, ವ್ಯಾಪಾರದಲ್ಲಿ ತೊಡಗಿರುವ ಕಂಪನಿಗಳಿಗೆ ಭೂ ಕಬಳಿಕೆ ಮಾಡಲು ದೊಡ್ಡ ಅಡ್ಡಿಯಾಗಿತ್ತು.

ಆದರೆ ಈ ಅಡ್ಡಿಗಳನ್ನು ನಿವಾರಿಸಿಕೊಳ್ಳಲು ಬಂಡವಾಳಶಾಹಿಗಳು ನಿರಂತರವಾಗಿ ಪ್ರಯತ್ನಿಸುತ್ತಿದ್ದರು. 1991ರ ನಂತರ ಹೊಸ ಆರ್ಥಿಕ ನೀತಿಗಳು ಜಾರಿಗೆ ತಂದ ಮೇಲೆ ಕೇಂದ್ರ ಸರ್ಕಾರ ಎಲ್ಲ ರಾಜ್ಯ ಸರ್ಕಾರಗಳಿಗೂ ಈ ಅಡ್ಡಿಗಳನ್ನು ತೆಗೆದು ಹಾಕಲು ಒತ್ತಾಯ ಮಾಡಲಾರಂಭಿಸಿತು. ಭೂ ಸುಧಾರಣೆ ಕಾನೂನು ಸಡಿಲಗೊಳಿಸುವುದು, ನಗರಗಳ ಬಾಡಿಗೆ ನಿಯಂತ್ರಣ ಕಾನೂನು ಸಡಿಲ ಗೊಳಿಸುವುದು, ಭೂ ಕಂದಾಯ ನಿಯಮಗಳ ತಿದ್ದುಪಡಿ, ಭೂ ದಾಖಲೆಗಳನ್ನು ಗಣಕೀಕರಿಸುವುದು ('ಭೂಮಿ' ಸಾಫ್ಟ್‌ವೇರ್) ಭೂಮಿಯ ಸರ್ವೆ ಖಾಸಗೀಕರಿಸುವುದು, ಆಧುನಿಕಗೊಳಿಸುವುದು ಇತ್ಯಾದಿ. ಇವುಗಳೆಲ್ಲವೂ 1991 ರಿಂದ ಒಂದೊಂದಾಗಿ ಜಾರಿ ಬರಲಾರಂಭಿಸಿದವು.

ಕರ್ನಾಟಕದಲ್ಲಿ 1994ರಲ್ಲಿ ಭೂ ಸುಧಾರಣೆ ಕಾನೂನಿಗೆ ಕೆಲವು ತಿದ್ದುಪಡಿಗಳನ್ನು ತರಲಾಯಿತು. ಈ ತಿದ್ದುಪಡಿಯ ಪ್ರಕಾರ ಜಿಲ್ಲಾಧಿಕಾರಿ, ಸರ್ಕಾರದ ಕಾರ್ಯದರ್ಶಿ, ಕಂದಾಯ ಸಚಿವರ ಅಧ್ಯಕ್ಷತೆಯಲ್ಲಿರುವ ಉನ್ನತಾಧಿಕಾರ ಸಮಿತಿ, ಮುಖ್ಯಮಂತ್ರಿಗಳ ಅಧ್ಯಕ್ಷತೆಯ ಬಂಡವಾಳ ಹೂಡಿಕೆ ಸಮಿತಿ ಕೃಷಿಯೇತರ ಉದ್ದೇಶಗಳಿಗೆ ಭೂಮಿಯನ್ನು ಕೊಳ್ಳಲು ಅನುಮತಿ ನೀಡಬಹುದಾಗಿದೆ. ಭೂಮಿ ಬೇಕಾದಾಗ ಸರ್ಕಾರವೇ ಕೆ.ಐ.ಎ.ಡಿ.ಬಿ. (ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ) ಯನ್ನು ಒಂದು ರಿಯಲ್ ಎಸ್ಟೇಟ್ ಏಜೆಂಟನ್ನಾಗಿ ಪರಿವರ್ತಿಸಿತು. ರೈತರ ಭೂಮಿಯನ್ನೂ ಸ್ವಾಧೀನ ಪಡಿಸಿಕೊಂಡದ್ದನ್ನು ನಂತರ ಶ್ರೀಮಂತರಿಗೆ ಡೀನೋಟಿಫೈ ಮಾಡಿಕೊಡುವ ಕ್ರಮಗಳು ಇಂದು ಮಹಾ ಭ್ರಷ್ಟಾಚಾರದ ಕೂಪವಾಗಿದೆ.

ಇದು ಒಂದು ಕಡೆಯಾದರೆ, ರಸಗೊಬ್ಬರ, ಔಷಧಿ, ಬೀಜ ಬೆಲೆಯಿಂದ, ಸಾಲದ ಬಡ್ಡಿಯ ಹೊರೆಯಿಂದ, ಫಸಲಿನ ಬೆಲೆ ಕುಸಿತದಿಂದ ನಷ್ಟಕ್ಕೊಳಗಾಗುತ್ತಿರುವ ಅನೇಕ ರೈತರು ಕೂಡ ತಮ್ಮ ಕೃಷಿ ಭೂಮಿಯನ್ನು ಮಾರುವ ಬಗ್ಗೆ ಚಿಂತಿಸುತ್ತಿದ್ದಾರೆ. ಯಾವುದೇ ಭೂಸ್ವಾಧೀನ ಪ್ರಕರಣದಲ್ಲಿ ಕಂಡು ಬರುತ್ತಿರುವ ಸಾಮಾನ್ಯ ದೃಶ್ಯವಿದು. ಏನೇ ಆದರೂ ಭೂಮಿ ಕೊಡುವುದಿಲ್ಲ ಎಂದು ಹೊರಟ ರೈತರು ಕೊಳ್ಳುವವರು ಭೂಮಿಯ ಬೆಲೆಯನ್ನು ತುಸು ತುಸುವೇ ಏರಿಸುತ್ತಿದ್ದಂತೆ ಸಡಿಲಾಗುತ್ತಿದ್ದಾರೆ, ಮಾರುವ ಆತುರ ತೋರುತ್ತಿದ್ದಾರೆ. ಇದು

ವರ್ಷ	1980–81	1990–91	2000–01	2002–03	2010–11	2011–12
ಆಹಾರ ಧಾನ್ಯಗಳ ಉತ್ಪಾದನೆ (ಲಕ್ಷ ಟನ್)	62.02	62.44	109.60	67.31	132	115

ತಾತ್ಕಾಲಿಕವಾಗಿ ರೈತರ ಕೈಗೆ ಹಣ ತಂದರೂ ರೈತಾ ಜನತೆ, ಹಳ್ಳಿಗಳು ತೀವ್ರ ತೊಂದರೆಗೆ ಒಳಗಾಗುತ್ತವೆ.

ರಾಜ್ಯದ ಒಟ್ಟಾರೆ ಉತ್ಪನ್ನದಲ್ಲಿ (ರಾಜ್ಯದ ಜಿಡಿ) ಕುಸಿತ ಕಾಣುತ್ತಿರುವ ಕೃಷಿಯ ಪಾಲು:

ಕೃಷಿ ರಂಗದ ಮೇಲೆ ರಾಜ್ಯದ ಶೇ.65ರಷ್ಟು ಜನತೆ ಅವಲಂಬಿಸಿದ್ದರೂ, ರಾಜ್ಯದ ಒಟ್ಟಾರೆ ಉತ್ಪನ್ನದಲ್ಲಿ ಕೃಷಿಯ ಪಾಲು ತೀವ್ರತರದಲ್ಲಿ ಕುಸಿತ ಕಾಣುತ್ತಿದೆ. ಇದು ರೈತಾ ವರ್ಗದ ಸಂಕಟಮಯ ಸನ್ನಿವೇಶವನ್ನು ಎತ್ತಿ ತೋರುತ್ತದೆ.

ಕೃಷಿ ಉತ್ಪಾದನಾ ಕುಸಿತದ ಚಿತ್ರಣ:

ರಾಜ್ಯದಲ್ಲಿ ಆಹಾರ ಧಾನ್ಯಗಳ ಉತ್ಪಾದನಾ ಮಟ್ಟ ಭಾರಿ ಏರಿಳಿತಗಳಿಂದ ಕೂಡಿದೆ. ಹಲವು ಬಾರಿ ಅಪಾಯಕಾರಿ ಮಟ್ಟದಲ್ಲಿ ಕುಸಿತ ಕಂಡಿದೆ. ಇದು ರಾಜ್ಯದ ಜನತೆಯನ್ನು ಹಸಿವಿನ ಅಂಚಿಗೆ ದೂಡಿದೆ.

ಕೃಷಿ ಭೂಮಿ ದೊಡ್ಡ ಪ್ರಮಾಣದಲ್ಲಿ ವ್ಯಾಪಾರ, ಶಿಕ್ಷಣ, ಆರೋಗ್ಯ ಸಂಸ್ಥೆಗಳಿಗೆ, ರಿಯಲ್ ಎಸ್ಟೇಟ್ ವ್ಯವಹಾರಕ್ಕೆ ಪರಿವರ್ತನೆಯಾಗುವುದು ಒಂದು ಅಪಾಯವಾದರೆ ಮತ್ತೊಂದು ಕೃಷಿ ಬಂಡವಾಳ ಹೂಡಿಕೆದಾರರ ಸಮಾವೇಶದಿಂದ ಬರುವ ಆಹಾರ ಬೆಳೆಯುವ ಭೂಮಿಯನ್ನು ರಫ್ತು ಆಧಾರಿತ ಹೂವು, ಹಣ್ಣು, ತರಕಾರಿ, ಸುಗಂಧ ದ್ರವ್ಯ ಮೊದಲಾದವುಗಳ ಬೆಳೆಗೆ ಬದಲಾಯಿಸುವುದು. ಇದು 'ಗುಜರಾತ್ ಮಾದರಿ' ಕೃಷಿ. ಈ ಎರಡರಿಂದಲೂ ಆಹಾರ ಬೆಳೆಗಳಿಗೆ ಇನ್ನಷ್ಟು ತೀವ್ರ ಧಕ್ಕೆಯಾಗಲಿದೆ. ಈಗಾಗಲೇ ಕರ್ನಾಟಕ ಆಹಾರದ ಕೊರತೆ ಇರುವ ರಾಜ್ಯ. ಕೃಷಿ ಭೂಮಿಯಲ್ಲಿ ಆಹಾರ ಬೆಳೆಯುತ್ತಿರುವ ಭೂಮಿಯ ಪ್ರಮಾಣ ಕುಗ್ಗಿದರೆ ಆಹಾರ ಬೆಳೆಯ ಪ್ರಮಾಣ ಕುಗ್ಗುತ್ತದೆ. ಇದರಿಂದ ಆಹಾರದ ಬೆಲೆಯೇರಿಕೆ ತೀವ್ರವಾಗಿ ಹೆಚ್ಚಾಗುತ್ತದೆ. ಹೆಚ್ಚು ಹೆಚ್ಚು ಆಹಾರದ ಆಮದಿನ ಮೇಲೆ ಅವಲಂಬಿಸಬೇಕಾಗುತ್ತದೆ. ಆಹಾರದ ಆಮದು ನಮ್ಮ ದೇಶದ ನೀತಿಯ ಮೇಲೆ ಮಾತ್ರವಲ್ಲ, ವಿದೇಶಗಳ ರಫ್ತು ನೀತಿಯ ಮೇಲೆ, ಅಲ್ಲಿನ ಉತ್ಪಾದನೆಯ ಪ್ರಮಾಣ, ಉತ್ಪಾದನಾ ವೆಚ್ಚದ ಮೇಲೆ ಅವಲಂಬಿತವಾಗಿದೆ.

ಕಂಪನಿಗಳ ಹಿಡಿತಕ್ಕೆ ಬೀಜ ಮತ್ತು ರಸಗೊಬ್ಬರ ಮಾರುಕಟ್ಟೆ

ಬೀಜಗಳನ್ನು ಒಳಗೊಂಡಂತೆ ಕೃಷಿ ಮತ್ತು ಸಂಬಂಧಿತ ಕ್ಷೇತ್ರದಲ್ಲಿ ವಿದೇಶಿ ನೇರ ಬಂಡವಾಳ ಹೂಡಲು ಕೇಂದ್ರ ಸರ್ಕಾರ 2011ರಲ್ಲಿ ಅನುಮತಿ ನೀಡಿದೆ. ಬೀಜ ಉತ್ಪಾದಿಸುವ ಸಾರ್ವಜನಿಕ ಉದ್ದಿಮೆಯಂತಾದ ರಾಷ್ಟ್ರೀಯ ಬೀಜ ನಿಗಮವನ್ನು ದುರ್ಬಲಗೊಳಿಸಿ, ಬಹುರಾಷ್ಟ್ರೀಯ ಕಂಪನಿಗಳು ಬೀಜ ವಹಿವಾಟಿನಲ್ಲಿ ತೊಡಗಲು ಭಾರತೀಯ ಬೀಜ ತಯಾರಕರು ಮತ್ತು ರೈತಾ ಯು ಕಂಪನಿಗಳ ಬಳಿ ಅಂಗಲಾಚುವ ಸನ್ನಿವೇಶ ಉಂಟಾಗುತ್ತದೆ. ನಿಯಂತ್ರಿತ ವಾತಾವರಣದಲ್ಲಿ ಬೀಜ ಉತ್ಪಾದಿಸುವ ಷರತ್ತನ್ನೂ ಕೂಡ ಕಂಪನಿಗಳ ಮೇಲೆ ವಿಧಿಸದೇ ಇರುವುದರಿಂದ ಬೀಜ ಉತ್ಪಾದನೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದಂತೆ ವಿಷಕಾರಿ ತಳಿಗಳ ಹರಡುವಿಕೆಯ ಸಾಧ್ಯತೆಯನ್ನು ತಳ್ಳಿಹಾಕಲಾಗದು.

ಯೂರಿಯಾ ಗೊಬ್ಬರದ ಬೆಲೆ ನಿಯಂತ್ರಣ ರದ್ದುಗೊಳಿಸಿ ಕಂಪನಿಗಳು ಮನಸೋ ಇಚೆ ಬೆಲೆಯೇರಿಕೆ ಮಾಡಲು ಅವಕಾಶ, ಅನಿಲ ಬೆಲೆಯೇರಿಕೆ ಮತ್ತು ಅಬಕಾರಿ ಸುಂಕ ಏರಿಕೆ ಪರಿಣಾಮವಾಗಿ ನಿರಂತರ ರಾಸಾಯನಿಕ ಗೊಬ್ಬರಗಳ ಬೆಲೆಯೇರಿಕೆ, ಪೌಷ್ಟಿಕಾಂಶ ಆಧಾರಿತ ರಸಗೊಬ್ಬರ ನೀತಿಯ ಜಾರಿ ಪರಿಣಾಮವಾಗಿ ರೈತರು ತತ್ತರಿಸುತ್ತಿದ್ದಾರೆ. ರಸಗೊಬ್ಬರ ಸಹಾಯಧನ ಕುರಿತ ಮಹಾಲೇಖಪಾಲರ ವರದಿಯಂತೆ, ಶೇ. 45 ರಷ್ಟು ರೈತರು ಮುಖಬೆಲೆಯಂತೆ ಹಣ ನೀಡುತ್ತಾರೆ. ಆದರೂ ಅವಶ್ಯವಿರುಷ್ಟು ರಸಗೊಬ್ಬರ ಪಡೆಯುವಲ್ಲಿ ಶೇ. 60ರಷ್ಟು ರೈತರು ಸಮಸ್ಯೆಗೆ ಸಿಲುಕುತ್ತಾರೆ.

ಪ್ರತ್ಯೇಕ ಕೋಶ ಮತ್ತು ಕೃಷಿ ರಂಗದ ಖಾಸಗೀಕರಣ

ಸಾರ್ವಜನಿಕ ಖಾಸಗಿ ಸಹಭಾಗಿತ್ವದ ( ) ಯೋಜನೆಗಳನ್ನು ತ್ವರಿತವಾಗಿ ಹೆಚ್ಚಿಸಲು ಸರ್ಕಾರ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯಲ್ಲಿ ಕೋಶ ಸ್ಥಾ ಸಿದೆ. ಸಾರ್ವಜನಿಕ ಕಂಪನಿಗಳ ಕಾರ್ಯವ್ಯಾ ್ತ ತಗ್ಗಿಸಲು ಮತ್ತು ಖಾಸಗೀಕರಣಕ್ಕೆ ರಹದಾರಿ ನೀಡಲು ಈ ಕೋಶ ಕೆಲಸ ಮಾಡುತ್ತದೆ. ಇದರ ಜೊತೆಗೆ ಶೀಘ್ರದಲ್ಲಿ ಮೂಲಭೂತ ಸೌಕರ್ಯಗಳಾದ ರಸ್ತೆ, ರೈಲು, ಕೈಗಾರಿಕಾ ಪ್ರದೇಶ, ಫ್ಲೈ ಓವರ್‌ಗಳು, ಇತ್ಯಾದಿ ಕಾರ್ಯಗಳಲ್ಲಿ ಖಾಸಗಿ ಕಂಪನಿಗಳನ್ನು ನೇರವಾಗಿ ತೊಡಗಿಸಲು ಮೂಲಭೂತ ಸೌಕರ್ಯ ಮಸೂದೆಯನ್ನು ಜಾರಿಗೆ ತರಲು ಪ್ರಯತ್ನಗಳು ನಡೆದಿವೆ.

ಗಿಮಿಕ್‌ಗಾಗಿ ಪ್ರತ್ಯೇಕ ಕೃಷಿ ಬಜೆಟ್‌ಗಳನ್ನು ಮಂಡಿಸುತ್ತಾ, ಬಹುರಾಷ್ಟ್ರೀಯ ಕಂಪನಿಗಳು ರಾಜ್ಯದಲ್ಲಿ ಬಂಡವಾಳ ಹೂಡುವ ಮುಖೇನಾ ರೈತರನ್ನು ಮತ್ತಷ್ಟು ಒಕ್ಕಲೆಬ್ಬಿಸಲು ಆ ಮೂಲಕ ರಾಜ್ಯದ ಬಂಡವಾಳಗಾರರು ಮತ್ತು ಭೂಮಾಲೀಕರಿಗೆ ಅನುವಾಗುವಂತೆ ಕೃಷಿ-ಬಂಡವಾಳ ಹೂಡಿಕೆದಾರರ ಸಮಾವೇಶಗಳನ್ನು ಬಿಜೆ ಸರ್ಕಾರ ನಡೆಸುತ್ತಿದೆ.

ಮುಕ್ತ ವ್ಯಾಪಾರ ಒಪ್ಪಂದ

ಡಬ್ಲ್ಯೂಟಿಒ ಒಪ್ಪಂದಕ್ಕೆ ಸಹಿ ಹಾಕಿ ಈಗಾಗಲೇ ಧೂಳಿಪಟ ಮಾಡಿರುವ ಕೃಷಿಕ ಸಮುದಾಯಕ್ಕೆ ಮತ್ತೊಂದು ಪೆಟ್ಟು ನೀಡಿರುವುದು 'ಏಷಿಯಾನ್' ಒಪ್ಪಂದಕ್ಕೆ ಭಾರತ ಸರ್ಕಾರ ಇತ್ತೀಚೆಗೆ ಸಹಿ ಹಾಕಿರುವುದು. ಇದರಿಂದ 10 ರಾಷ್ಟ್ರಗಳ ಕೃಷಿ ಉತ್ಪನ್ನಗಳು ಯಾವುದೇ ತೆರಿಗೆಯಿಲ್ಲದೆ ನಮ್ಮ ದೇಶಕ್ಕೆ ಆಮದಾಗುತ್ತವೆ.



ವಿದೇಶಿ ನೇರ ಬಂಡವಾಳ ಮತ್ತು ಸ್ಥಳೀಯ ಮಾರುಕಟ್ಟೆ.

ಡಾ. ಟಿ.ಆರ್.ಚಂದ್ರಶೇಖರ
'ವಚನ'. ಸೊಸೈಟಿ ರಸ್ತೆ.
ಅಮರಾವತಿ, ಹೊಸಪೇಟೆ 583 201. 94490 29311.

ಪ್ರಸ್ತಾವನೆ.

ಅಭಿವೃದ್ಧಿ ಮತ್ತು ಬಂಡವಾಳ ಹೂಡಿಕೆ ನಡುವಿನ ಸಂಬಂಧ ಮತ್ತು ಅದನ್ನು ಕುರಿತ ಚರ್ಚೆ ಅರ್ಥಶಾಸ್ತ್ರದಲ್ಲಿ ಮತ್ತು ಅಭಿವೃದ್ಧಿ ಅಧ್ಯಯನಗಳಲ್ಲಿ ಒಂದು ಭಾವ ಗರ್ಭಿತ ಸಂಗತಿಯಾಗಿದೆ. 'ಬಂಡವಾಳ ಹೂಡಿಕೆಯೇ ಅಭಿವೃದ್ಧಿಯ ಕೀಲಿಕೈ' ಎಂಬ ಸೂತ್ರವನ್ನು ಅರ್ಥಶಾಸ್ತ್ರಜ್ಞರು ನೂರಾರು ವರ್ಷಗಳಿಂದ ಪ್ರತಿಪಾದಿಸಿಕೊಂಡು ಬರುತ್ತಿದ್ದಾರೆ. 'ಶೇಕಡ 05ರಷ್ಟು(ಜಿಡಿ ಯಲ್ಲಿ) ಉಳಿತಾಯ ಮಾಡುತ್ತಿರುವ ದೇಶವನ್ನು ಶೇ15 ರಿಂದ 20ರಷ್ಟು(ಜಿಡಿ ಯಲ್ಲಿ) ಉಳಿತಾಯ ಮಾಡುವ ದೇಶವನ್ನಾಗಿ ಪರಿವರ್ತಿಸುವುದೇ ಅಭಿವೃದ್ಧಿ' ಎಂಬ ಆರ್ಥರ್ ಲಿವೀಸ್ ಅವರ ಮಾತು ಇದಕ್ಕೆ ನಿದರ್ಶನವಾಗಿದೆ. ಮೊನ್ನೆ ಮೊನ್ನೆಯವರೆವಿಗೂ ಅಭಿವೃದ್ಧಿಯನ್ನು ಉಳಿತಾಯ, ಬಂಡವಾಳ, ಬಡ್ಡಿ, ವರಮಾನ ಮುಂತಾದ ಸಂಗತಿಗಳ ನಡುವೆ ಗಿರಕಿ ಹೊಡೆಯುವ ವಿಷಯವೆಂದು ಚರ್ಚಿಸಲಾಗುತ್ತಿತ್ತು. ಇದುವರೆವಿಗೂ ಪ್ರತಿಪಾದಿಸಿಕೊಂಡು ಬಂದಿರುವ ಅಭಿವೃದ್ಧಿ ಕುರಿತ ಸಿದ್ಧಾಂತಗಳಲ್ಲಿ 'ಸ್ಥಳೀಯತೆ'ಗೆ ಯಾವುದೇ ಸ್ಥಾನವನ್ನು ನೀಡಿಲ್ಲ ಎಂಬುದನ್ನು ನಾವು ಗಮನಿಸಬೇಕು. 'ಸ್ಥಳೀಯತೆ' ಎಂಬುದನ್ನು ಇಲ್ಲಿ ಒಂದು ಪ್ರದೇಶದ ಜನರು, ಅವರ ಆರ್ಥಿಕ ಚಟುವಟಿಕೆಗಳು, ಅಲ್ಲಿನ ಮಾರುಕಟ್ಟೆ, ಅಲ್ಲಿನ ಆದರ್ಶಗಳು, ನಿರೀಕ್ಷೆಗಳು, ಉತ್ಪಾದನೆ, ಉದ್ಯೋಗ, ಅಲ್ಲಿನ ಸಂಪನ್ಮೂಲಗಳು, ಸಾಮಾಜಿಕ ರಚನೆ ಮುಂತಾದವುಗಳನ್ನು ಒಳಗೊಂಡ ಒಂದು ವ್ಯವಸ್ಥೆ ಎಂದು ನಿರ್ವಚಿಸಿಕೊಳ್ಳಲಾಗಿದೆ. ಅಭಿವೃದ್ಧಿಯನ್ನು ಕುರಿತ ಸೈದ್ಧಾಂತಿಕ ಚರ್ಚೆಗಳಲ್ಲಿ ಇಂತಹ ಸ್ಥಳೀಯತೆಯ ಸಂಗತಿಗಳು ಗೌಣವಾಗಿ ಬಿಟ್ಟಿವೆ. ಇಲ್ಲಿ ನಾವು ನಿರ್ವಚಿಸಿಕೊಂಡಿರುವ ಸ್ಥಳೀಯತೆಯ ಮೇಲೆ ವಿದೇಶಿ ಬಂಡವಾಳ ಹೂಡಿಕೆಯು ಉಂಟು ಮಾಡಿರುವ ಪರಿಣಾಮ ಮರಣ ಸದೃಶವಾಗಿದೆ. ನಮ್ಮ ದೇಶದ ಸಂದರ್ಭದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆ ಮತ್ತು ಸ್ಥಳೀಯ ಆರ್ಥಿಕತೆಗಳ ನಡುವಿನ ಸಂಬಂಧವನ್ನು ಕುರಿತಂತೆ ಇಲ್ಲಿ ಚರ್ಚಿಸಲಾಗಿದೆ. ಪ್ರಬಂಧದಲ್ಲಿ ಮೂರು ಭಾಗಗಳಿವೆ. ಮೊದಲನೆಯ ಭಾಗದಲ್ಲಿ ಸ್ಥಳೀಯತೆ ಎಂಬುದರ ವಿವಿಧ ನೆಲೆಗಳನ್ನು ಅಭಿವೃದ್ಧಿಯ ಚೌಕಟ್ಟಿನಲ್ಲಿ ವಿವರಿಸಲಾಗಿದೆ. ಎರಡನೆಯ ಭಾಗದಲ್ಲಿ ವಿದೇಶಿ ಬಂಡವಾಳ ಹೂಡಿಕೆ – ಗ್ರಾಹಕ ನೆಲೆಯ ಮಾರುಕಟ್ಟೆ ಮೇಲಿನ(ರಿಟೇಲ್ ಟ್ರೇಡಿಂಗ್) ವಿದೇಶಿ ನೇರ ಬಂಡವಾಳ ಹೂಡಿಕೆಗಳಿಗೆ ಸಂಬಂಧಿಸಿದ ಸಂಗತಿಗಳನ್ನು ಚರ್ಚಿಸಲಾಗಿದೆ. ಮೂರನೆಯ ಭಾಗದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆ ಮತ್ತು ಸ್ಥಳೀಯ ಮಾರುಕಟ್ಟೆ-ಆರ್ಥಿಕತೆಗಳ ನಡುವಿನ ಸಂಬಂಧವನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಭಾಗ-1

ಸ್ಥಳೀಯ ಆರ್ಥಿಕತೆ-ಮಾರುಕಟ್ಟೆ.

ಜನರು ತಮ್ಮ ಬದುಕನ್ನು ತಾವು ನೆಲಸಿರುವ ಪ್ರದೇಶದ ಭೂಗೋಳಿಕ ಸ್ವರೂಪ, ಸಂಪನ್ಮೂಲಗಳ ಲಭ್ಯತೆ, ಚಾರಿತ್ರಿಕ ಸಂಗತಿಗಳು, ಸಾಮಾಜಿಕ ರಚನೆಗಳ ಆಧಾರದಲ್ಲಿ ಕಟ್ಟಿಕೊಳ್ಳುತ್ತಾರೆ. ಹೀಗೆ ಕಟ್ಟಿಕೊಂಡ ಬದುಕು ಅಲ್ಲಿನ ನೈಸರ್ಗಿಕ ವ್ಯವಸ್ಥೆಯನ್ನು ಅವಲಂಬಿಸಿಕೊಂಡಿರುತ್ತದೆ. ಈ ಪ್ರದೇಶ ಅನ್ನುವುದು ಎಷ್ಟೇ ಪ್ರಮಾಣದಲ್ಲಿ ರಾಷ್ಟ್ರೀಯ-ಅಂತಾರಾಷ್ಟ್ರೀಯತೆ ಜೊತೆಯಲ್ಲಿ ಸಂಬಂಧವಿಟ್ಟುಕೊಂಡಿದ್ದರೂ ಅಲ್ಲಿನ ಉತ್ಪಾದನೆ, ಮಾರುಕಟ್ಟೆ, ಕುಶಲತೆ, ಬದುಕಿನ ಸ್ವರೂಪ ಮುಂತಾದವು ಪ್ರದೇಶ-ನಿರ್ದಿಷ್ಟವಾದಾಗಿರುತ್ತದೆ. ಸ್ಥಳೀಯ ಸಂಪನ್ಮೂಲಗಳನ್ನು ಆಧರಿಸಿಕೊಂಡು ಅಲ್ಲಿನ ಉತ್ಪಾದನಾ ವ್ಯವಸ್ಥೆಯು ರೂಪುಗೊಂಡಿರುತ್ತದೆ. ಅದು ಸ್ವಯಂಪೂರ್ಣವಾಗಿರುವುದಿಲ್ಲ, ನಿಜ. ಆದರೆ ಅಲ್ಲಿನ ಬದುಕು ತನ್ನೆಲ್ಲ ಇತಿಮಿತಿಗಳಲ್ಲಿ ಸಹ್ಯವಾಗಿರುತ್ತದೆ. ಸ್ಥಳೀಯ ಆರ್ಥಿಕತೆಯು ಸ್ಥಳೀಯವಾಗಿರುವುದು ಸಾಧ್ಯವಿಲ್ಲ ಎಂಬುದು ನಿಜ. ಆದರೂ ಸ್ಥಳೀಯತೆ ಎನ್ನುವುದು ಒಂದು ಇರುತ್ತದೆ. ಅಲ್ಲಿ ಉತ್ಪಾದನೆಯು ಸಾವಯವವಾಗಿರುತ್ತದೆ. ಉತ್ಪಾದನೆಯು ಸ್ಥಳೀಯ ಸಂಪನ್ಮೂಲಗಳನ್ನು ಅವಲಂಬಿಸಿಕೊಂಡಿರುತ್ತದೆ. ಅಲ್ಲಿ ಜನರ ಬದುಕು ಹಾಗೂ ಆರ್ಥಿಕ ವ್ಯವಸ್ಥೆಯು ಪ್ರಕೃತಿಯ ಜೊತೆಯಲ್ಲಿ ಸಹ್ಯವಾದ ಸಂಬಂಧವಿಟ್ಟುಕೊಂಡಿರುತ್ತದೆ. ಇದರರ್ಥ ಅಲ್ಲಿ ಅಸಮಾನತೆ, ಶೋಷಣೆ, ಪಾಳೆಗಾರಿಕೆ ಇರುವುದಿಲ್ಲ ಎಂದು ಭಾವಿಸಬೇಕಾಗಿಲ್ಲ. ತನ್ನೆಲ್ಲ ಮಿತಿಗಳೊಳಗೆ ಅದು ಬದುಕನ್ನು ಸಹ್ಯವನ್ನಾಗಿ ಮಾಡಿರುತ್ತದೆ.

ಭಾರತದ ಆರ್ಥಿಕ ವ್ಯವಸ್ಥೆಯು 1950 ರಿಂದ 1990ರವರೆಗೆ

ಒಂದು ರೀತಿಯಲ್ಲಿ ಸ್ಥಳೀಯತೆಯನ್ನು ಆಧರಿಸಿದ್ದಾಗಿತ್ತು. ಅದು ಅಂತಾರಾಷ್ಟ್ರೀಯವಾಗಿ ಸಂಬಂಧವಿಟ್ಟುಕೊಂಡಿತ್ತು. ರಫ್ತು-ಆಮದು ವ್ಯಾಪಾರವಿತ್ತು. ಜನರ ವಲಸೆಯಿತ್ತು. ಅದು ಕೇವಲ ಗ್ರಾಮೀಣದಿಂದ ನಗರ ಪ್ರದೇಶಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ವಿದೇಶಗಳಿಗೆ ಹೋಗುವ ವಲಸೆಯಿತ್ತು. ಉದಾಹರಣೆಗೆ ಕೇರಳ ರಾಜ್ಯದಿಂದ ದುಡಿಮೆಗಾರರು ಅಧಿಕ ಸಂಖ್ಯೆಯಲ್ಲಿ ಬಹಳ ಹಿಂದಿನಿಂದಲೂ ಕೊಲ್ಲಿ ಪ್ರದೇಶಕ್ಕೆ ವಲಸೆ ಹೋಗುತ್ತಿದ್ದರು. ಇಷ್ಟಾದರೂ ಕೇರಳದ ಸ್ಥಳೀಯ ಆರ್ಥಿಕತೆ ಎಂಬುದೊಂದು ಇಂದಿಗೂ ಜೀವಂತವಾಗಿದೆ. ಈ ಬಗೆಯ ಸ್ಥಳೀಯತೆಯನ್ನು ಆಧರಿಸಿಯೇ ಅಲ್ಲಿ ಇಂದು ದೊಡ್ಡ ಪ್ರಮಾಣದಲ್ಲಿ ಆರೋಗ್ಯ ಪ್ರವಾಸೋದ್ಯಮವು ಬೆಳೆಯುತ್ತಿದೆ. ವೈದ್ಯಕೀಯ(ಆಯುರ್ವೇದ) ಪ್ರವಾಸೋದ್ಯಮವೂ ವಿಸ್ತರಣೆಯಾಗುತ್ತಿದೆ. ಅಲ್ಲಿನ ಮೀನುಗಾರಿಕೆ, ನಾರು ಉದ್ದಿಮೆ, ಸಂಬಾರು ಪದಾರ್ಥಗಳ ಉತ್ಪಾದನೆ-ಸಂಸ್ಕರಣೆ ಮುಂತಾದವುಗಳು ಸ್ಥಳೀಯತೆಯ ನೆಲೆಯನ್ನು ಹೊಂದಿರುವುದನ್ನು ಗುರುತಿಸಬಹುದಾಗಿದೆ. ಸ್ಥಳೀಯತೆಯು ಒಂದು ಪ್ರದೇಶದ ಎಲ್ಲ ಚಟುವಟಿಕೆಗಳ ಮೇಲೆ ಪ್ರಭಾವ ಬೀರುತ್ತಿರುತ್ತದೆ. ಈ ಸ್ಥಳೀಯತೆ ಎಂಬುದು ನಮ್ಮ ದೇಶಕ್ಕೆ ಹೇಗೆ ನಿಜವೋ ಅದೇ ರೀತಿಯಲ್ಲಿ ಅದು ಚೀನಾ ದೇಶಕ್ಕೆ, ಅಮೆರಿಕೆಗೆ, ಆಫ್ರಿಕಾ, ಯೂರೋಪಿಗೂ ನಿಜ. ಪ್ರತಿಯೊಂದು ದೇಶಕ್ಕೂ ತನ್ನದೇ ಆದ ಸ್ಥಳೀಯತೆ ಎಂಬುದೊಂದಿರುತ್ತದೆ. ನಮ್ಮ ದೇಶದಲ್ಲಿ ಈ ಸ್ಥಳೀಯತೆ ಎಂಬುದು ರಾಜ್ಯ-ರಾಜ್ಯಗಳ ನಡುವೆ ಭಿನ್ನವಾಗಿರುತ್ತದೆ. ನಮ್ಮ ದೇಶದಲ್ಲಿ ಪ್ರತಿಯೊಂದು ರಾಜ್ಯವೂ ತನ್ನ ವಿಶಿಷ್ಟತೆಯನ್ನು ಕಾಯ್ದುಕೊಂಡಿದೆ. ಈ ವಿಶಿಷ್ಟತೆಯನ್ನು ಕಾಯ್ದುಕೊಳ್ಳುವ ಪ್ರದೇಶದ ಗುಣವನ್ನೇ ಇಲ್ಲಿ ಸ್ಥಳೀಯತೆ ಎಂದು ಕರೆಯಲಾಗಿದೆ. ಸ್ಥಳೀಯ ಮಾರುಕಟ್ಟೆಯು ಮಾರಾಟದ ಕೇಂದ್ರವಾಗಿದೆ ಮಾತ್ರವಲ್ಲ, ಅದು ಉದ್ಯೋಗದ ಮೂಲವೂ ಆಗಿದೆ. ಈ ಮಾರುಕಟ್ಟೆಯಲ್ಲಿ ಸ್ಥಳೀಯ ಸರಕುಗಳ ಮಾರಾಟವಲ್ಲದೆ ಹೊರಗಡೆಯಿಂದ ತಂದ ಸರಕುಗಳ ವ್ಯಾಪಾರವೂ ಇಲ್ಲಿ ನಡೆಯುತ್ತದೆ. ಹಣಕಾಸು ವ್ಯವಸ್ಥೆಯು ರಾಷ್ಟ್ರೀಯವಾದುದಿರಬಹುದು. ಅದರಲ್ಲಿ ಮಾರುಕಟ್ಟೆಯು ಸ್ಥಳೀಯತೆಯನ್ನು ರೂಪಿಸಿಕೊಂಡಿರುತ್ತದೆ. ತನ್ನದೇ ಆದ ಸ್ಥಳೀಯವಾದ ಹಣಕಾಸು ವ್ಯವಹಾರವನ್ನು ಆವಿಷ್ಕಾರ ಮಾಡಿಕೊಂಡಿರುತ್ತದೆ. ಸ್ಥಳೀಯ ಆರ್ಥಿಕತೆಯಲ್ಲಿ ಮಾರಾಟ-ಉತ್ಪಾದನೆ ವ್ಯವಹಾರಗಳಲ್ಲದೆ ಕಲೆ, ಸಂಗೀತ, ನಾಟಕ ಮುಂತಾದವುಗಳು ವಿಶಿಷ್ಟ ಸ್ಥಾನ ಪಡೆದುಕೊಂಡಿರುತ್ತವೆ. ಅವು ಸ್ಥಳೀಯ ಮಾರುಕಟ್ಟೆಯಲ್ಲಿ ಮಾರಾಟದ ಸರಕುಗಳಾಗಿರುತ್ತವೆ.



ಇಂತಹ ಆರ್ಥಿಕತೆಯನ್ನು, ಮಾರುಕಟ್ಟೆಯನ್ನು, ಹಣಕಾಸು ವ್ಯವಸ್ಥೆಯನ್ನು ಪಶ್ಚಿಮವು ಅಥವಾ ಅಲ್ಲಿ ತರಬೇತಿ ಪಡೆದ ತಜ್ಞರು ಸಾಂಪ್ರದಾಯಿಕ, ಅನೌಪಚಾರಿಕ, ಹಿಂದುಳಿದ, ಆಧುನಿಕ-ಪೂರ್ವ, ಕಾರ್ಯಕ್ಷಮತೆಯು ಅತ್ಯಂತ ಕೆಳಮಟ್ಟದಲ್ಲಿರುವ, ಊಳಿಗಮಾನ್ಯ, ಅಸಂಘಟಿತ ವ್ಯವಸ್ಥೆಯೆಂದು ಹಣೆ ಪಟ್ಟಿ ಹಚ್ಚಿ ಹೀಗಳೆಯಲಾಗುತ್ತದೆ. ಈ ಸ್ಥಳೀಯ ಆರ್ಥಿಕತೆಯಲ್ಲಿ ವೃತ್ತಿ ನಿರತ ಕುಶಲ ಕಾರ್ಮಿಕರು ಸ್ಥಳೀಯ ಸಂಪನ್ಮೂಲವನ್ನು ಬಳಸಿಕೊಂಡು ಉತ್ಪಾದನೆ ಮತ್ತು ಮಾರಾಟ ನಡೆಸುತ್ತಿರುತ್ತಾರೆ. ಸ್ಥಳೀಯ ಆರ್ಥಿಕತೆಯಲ್ಲಿ ಸಾಮಾನ್ಯವಾಗಿ ಉತ್ಪಾದನೆ ಮತ್ತು ಮಾರಾಟ ಎರಡನ್ನು ಕುಶಲಕರ್ಮಿಗಳೆ ನಡೆಸುತ್ತಿರುತ್ತಾರೆ. ಇಲ್ಲಿ ಕುಶಲ ಕರ್ಮಿಗಳು ಉತ್ಪಾದಕರೂ ಹೌದು, ಮಾರಾಟಗಾರರೂ ಹೌದು ಮತ್ತು ಅವರೇ ಅಲ್ಲಿನ ಕಾರ್ಮಿಕರೂ ಹೌದು. ಇಲ್ಲಿ 'ಕೂಲಿ ದುಡಿಮೆ'ಗಿಂತ ಅಧಿಕವಾಗಿ 'ಸ್ವಯಂ ಉದ್ಯೋಗ' ಹೆಚ್ಚು ಕಂಡು ಬರುತ್ತದೆ. ಒಂದು ಪ್ರದೇಶವು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಂಬಂಧಗಳನ್ನು ಇಟ್ಟುಕೊಂಡೂ ಸಹ ಸ್ಥಳೀಯತೆಯನ್ನು ಕಾಯ್ದುಕೊಂಡಿರುತ್ತದೆ.

ಭಾಗ-2

ಸ್ಥಳೀಯತೆಯ ನಾಶ ಮತ್ತು ವಿದೇಶಿ ಬಂಡವಾಳದ ಪ್ರಭುತ್ವ

ವಿದೇಶಿ ಬಂಡವಾಳ ಮತ್ತು ಬಹುರಾಷ್ಟ್ರೀಯ ಕಂಪನಿಗಳ ಪ್ರವೇಶದಿಂದ ನಮ್ಮ ಆರ್ಥಿಕತೆ, ಜನರ ಬದುಕು, ಉದ್ಯೋಗ, ಸಂಪನ್ಮೂಲಗಳು, ಪರ್ಯಾವರಣ ಮುಂತಾದವುಗಳ ಮೇಲೆ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ವ್ಯಾಪಕ ಅಧ್ಯಯನಗಳು ನಡೆದಿವೆ. ಆದರೆ ಸ್ಥಳೀಯ ಆರ್ಥಿಕತೆ-ಮಾರುಕಟ್ಟೆಯ ಮೇಲೆ ಅವು ಉಂಟು ಮಾಡಬಹುದಾದ ಪರಿಣಾಮದ ಬಗ್ಗೆ ಹೆಚ್ಚು ಗಮನ ಹರಿದಂತೆ ಕಾಣುವುದಿಲ್ಲ. ನನ್ನ ಪ್ರಕಾರ ವಿದೇಶಿ ಬಂಡವಾಳದ ಪ್ರವೇಶದಿಂದ ನಮ್ಮ ಆರ್ಥಿಕತೆಗೆ ಸಂಬಂಧಿಸಿದಂತೆ ಉಂಟಾಗುತ್ತಿರುವ ಅಘಾತಕಾರಿ ಪರಿಣಾಮವೆಂದರೆ ಸ್ಥಳೀಯ ಆರ್ಥಿಕತೆ-ಮಾರುಕಟ್ಟೆಯ ನಾಶ. ಬಹು ಬ್ರಾಂಡ್ ಸರಕುಗಳ ರೀಟೇಲ್ ಮಾರುಕಟ್ಟೆಯಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಗೆ ಅವಕಾಶ ನೀಡುವುದರಿಂದ ಉಂಟಾಗಬಹುದಾದ ಅತಿ ದೊಡ್ಡ ಪರಿಣಾಮವೆಂದರೆ ಸ್ಥಳೀಯ ಆರ್ಥಿಕತೆ-ಮಾರುಕಟ್ಟೆಗಳ ವಿನಾಶ ಮತ್ತು ಅದನ್ನು ವಿವಿಧ ರೀತಿಯಲ್ಲಿ ಅವಲಬಿಸಿರುವ ದುಡಿಮೆಗಾರರ ಬದುಕು ಇದರಿಂದಾಗಿ ಅಸ್ತವ್ಯಸ್ತವಾಗಿ ಬಿಡುತ್ತದೆ. ಸ್ಥಳೀಯತೆಯು ತನ್ನ

ವಿಶಿಷ್ಟತೆಯನ್ನು ಕಳೆದುಕೊಂಡು ಬಿಡುತ್ತದೆ. ಸ್ಥಳೀಯ ಆರ್ಥಿಕತೆ ಮತ್ತು ಮಾರುಕಟ್ಟೆಗಳು ಸ್ಥಳೀಯ ಜನರನ್ನು ಒಳಗೊಂಡಿರುವ ವ್ಯವಸ್ಥೆಯಾಗಿರುತ್ತವೆ. ಆದರೆ ವಿದೇಶಿ ಬಂಡವಾಳ ಮತ್ತು ಬಹುರಾಷ್ಟ್ರೀಯ ಕಂಪನಿಗಳು ಇಂತಹ ಜನರನ್ನು ಒಳಗೊಳ್ಳುವ ವ್ಯವಸ್ಥೆಯನ್ನು ಮುರಿದು ಬಿಡುತ್ತದೆ. ಇಂದು ಸ್ಥಳೀಯ ಮಾರುಕಟ್ಟೆ ಹೇಗಿರುತ್ತದೆ ಎಂಬುದನ್ನು ನೋಡಬೇಕೆಂದರೆ ನಮ್ಮ ರಾಜ್ಯದ ಕೊಪ್ಪಳ, ರಾಯಚೂರು, ಗುಲಬರ್ಗಾ, ಬೀದರ್, ಗದಗ, ಬೆಳಗಾವಿ, ಹುಬ್ಬಳ್ಳಿ ಮುಂತಾದ ನಗರಗಳಲ್ಲಿನ ಮಾರುಕಟ್ಟೆಗೆ ಭೇಟಿ ಕೊಡಬೇಕು. ಈ ಎಲ್ಲ ಜಿಲ್ಲೆಗಳ ತಾಲ್ಲೂಕು ಕೇಂದ್ರಗಳಲ್ಲಿ ಸ್ಥಳೀಯ ಮಾರುಕಟ್ಟೆಯ ವಿರಾಟ್ ಸ್ವರೂಪವನ್ನು ಕಾಣಬಹುದು. ಇಲ್ಲಿ ನೂರಾರು ಜನರು ನೂರಾರು ಬಗೆಯ ಸರಕುಗಳನ್ನು ನೂರಾರು ಬಗೆಯ ರೀತಿಯಲ್ಲಿ ಮಾರಾಟ ಮಾಡುತ್ತಿರುವುದನ್ನು ಕಾಣಬಹುದು. ತಲೆಯ ಮೇಲೆ ಹೊತ್ತು ಮಾರುವವರು, ತಳ್ಳುವ ಗಾಡಿಗಳಲ್ಲಿ, ಚಿಕ್ಕ-ಪುಟ್ಟ ಹೊತ್ತೊಯ್ಯಬಹುದಾದ ಉಪಕರಣಗಳಲ್ಲಿ, ಸೈಕಲ್ಲುಗಳ ಮೇಲೆ, ಕಾರು-ವ್ಯಾನುಗಳಲ್ಲಿ -- ಹೀಗೆ ಅಕ್ಷರಶಃ ನೂರಾರು ವಿಧಗಳಲ್ಲಿ, ನೂರಾರು ಬಗೆಯ ವಸ್ತುಗಳನ್ನು, ವ್ಯಾಪಾರ ಮಾಡುವವರನ್ನು, ಖರೀದಿಗಾರರನ್ನು-ಗ್ರಾಹಕರನ್ನು ಇಲ್ಲಿ ನೋಡಬಹುದು. ವಿದೇಶಿ ನೇರ ಬಂಡವಾಳ ಇಂತಹ ರೀಟೇಲ್ ಮಾರುಕಟ್ಟೆಯನ್ನು ಪ್ರವೇಶಿಸಿ ಬಿಟ್ಟರೆ ಇವರೆಲ್ಲ ಅನಾಥರಾಗಿ ಬಿಡುತ್ತಾರೆ. ಈ ಬಗೆಯ ಮಾರಾಟದಲ್ಲಿ ನಿರತರಾಗಿರುವವರಲ್ಲಿ ಅತಿ ಹೆಚ್ಚು ಮಹಿಳಾ ದುಡಿಮೆಗಾರರಿರುತ್ತಾರೆ. ಈ ಬಗೆಯ ಮಾರುಕಟ್ಟೆಗೆ ವಿದೇಶಿ ಬಂಡವಾಳ ಪ್ರವೇಶಿಸಿ ಬಿಟ್ಟರೆ ನಮ್ಮ ಮಧ್ಯಮವರ್ಗದ ಜನರು ಅವುಗಳಿಗೆ ಮುಗಿ ಬೀಳುತ್ತಾರೆ. ಈಗ ಸ್ಥಳೀಯ ಮಾರುಕಟ್ಟೆಯು ಇವರಿಗೆ ಅಸಹ್ಯವಾದ ಸಂಗತಿಯಾಗಿ ಬಿಡುತ್ತದೆ. ಅಲ್ಲಿನ ಕೊಳಕುತನ, ಅಲ್ಲಿನ ಚೌಕಾಸಿತನ, ಅಲ್ಲಿನ ಜನರ ಕಂಗಾಲುತನ, ಮಹಿಳಾ ಮಾರಾಟಗಾರರಲ್ಲಿ ನಡೆಯುವ ಕಿತ್ತಾಟ, ಸರಕುಗಳ ಗುಣಮಟ್ಟದಲ್ಲಿನ ಸಮಸ್ಯೆಗಳು ಮುಂತಾದವುಗಳ ಕಾರಣವಾಗಿ ಅವೆಲ್ಲ ಏಕದಂ ತಿರಸ್ಕಾರದ ಸಂಗತಿಗಳಾಗಿ ಬಿಡುತ್ತವೆ. ವಿದೇಶಿ ಬಂಡವಾಳದ ಮಾಲ್-ಮಾರ್ಟ್‌ಗಳಿಗೆ ಹೋಗುವುದು ನಮ್ಮ ಮಧ್ಯಮ ವರ್ಗಕ್ಕೆ ಒಂದು ಬಗೆಯ ಪ್ರತಿಷ್ಠೆಯ ಸಂಗತಿಯಾಗಿ ಬಿಡುತ್ತದೆ. ಈ ಎರಡೂ ಬಗೆಯ ಬೆಳವಣಿಗೆಯಿಂದಾಗಿ ಸ್ಥಳೀಯ ಆರ್ಥಿಕತೆ ಮತ್ತು ಮಾರುಕಟ್ಟೆ ನಶಿಸಿ ಬಿಡುತ್ತದೆ. ಉದ್ಯೋಗಗಳು ತಮ್ಮಷ್ಟಕ್ಕೆ ತಾವು ಇಲ್ಲವಾಗಿ ಬಿಡುತ್ತವೆ. ಸ್ಥಳೀಯ ಆರ್ಥಿಕತೆಯು ಸಂಪೂರ್ಣವಾಗಿ 'ಬಂಡವಾಳ'ದ ಅಡಿಯಾಳಾಗಿ ಬಿಡುತ್ತದೆ.

ವಿದೇಶಿ ಬಂಡವಾಳ-ಸ್ಥಳೀಯ ಮಾರುಕಟ್ಟೆ ಮತ್ತು ಸರ್ಕಾರಗಳ ಪಾತ್ರ ಮತ್ತು ನೀತಿ.

ಸ್ಥಳೀಯ ಮಾರುಕಟ್ಟೆಯ ಬೆಳವಣಿಗೆಯ ಮೇಲೆ ನಮ್ಮ ಸರ್ಕಾರಗಳು ಬಂಡವಾಳ ತೊಡಗಿಸುತ್ತಿಲ್ಲ. ನಮ್ಮ ನಗರ-ಪಟ್ಟಣಗಳಲ್ಲಿ ಇರುವ ಪುರಸಭೆಗಳು, ಪಾಲಿಕೆಗಳು, ನಗರಸಭೆಗಳು ರವಷ್ಟೂ ಹಣವನ್ನು ಸ್ಥಳೀಯ ಮಾರುಕಟ್ಟೆಯನ್ನು ಉತ್ತಮ ಪಡಿಸುವ ದಿಶೆಯಲ್ಲಿ ತೊಡಗಿಸುತ್ತಿಲ್ಲ. ಆದರೆ ವಿದೇಶಿ ಬಂಡವಾಳದ ಬಗ್ಗೆ, ಅವುಗಳಿಗೆ ಅನುಕೂಲ ಒದಗಿಸುವ ಬಗ್ಗೆ, ಕಾನೂನಾತ್ಮಕ ರಕ್ಷಣೆ ನೀಡುವ ಬಗ್ಗೆ ಅವು ಅತಿಯಾದ ಉತ್ಸಾಹ ತೋರುವುದು ಕಂಡು ಬರುತ್ತದೆ. ನಮ್ಮ ನಗರ-ಪಟ್ಟಣಗಳಲ್ಲಿರುವ ತರಕಾರಿ ಮಾರುಕಟ್ಟೆಗಳನ್ನು ಇದಕ್ಕೆ ನಿದರ್ಶನವಾಗಿ ನೋಡಬಹುದು. ಈ ಪುರಸಭೆಗಳು, ಪಾಲಿಕೆಗಳು, ನಗರಸಭೆಗಳು, ಪಟ್ಟಣ ಪಂಚಾಯಿತಿಗಳು ತಮ್ಮ ತಮ್ಮ ಪಟ್ಟಣ-ನಗರಗಳಲ್ಲಿನ ಮಾರುಕಟ್ಟೆಗಳನ್ನು ಮಾಲ್-ಮಾರ್ಟ್‌ಗಳಂತೆ ಇಟ್ಟುಕೊಳ್ಳಬಹುದು. ವಿದೇಶಿ ಬಂಡವಾಳದ ಬಹುರಾಷ್ಟ್ರೀಯ ಕಂಪನಿಗಳು ನಮ್ಮ ನಗರಕ್ಕೆ ಬಂತೆಂದರೆ ಅವುಗಳಿಗೆ ಅನುಕೂಲ ಮಾಡಿಕೊಡಲು ನಗರ ಸ್ಥಳೀಯ ಸಂಸ್ಥೆಗಳು ತುದಿಗಾಲಿನ ಮೇಲೆ ನಿಂತಿರುತ್ತವೆ. ಮಾರ್ಟ್-ಮಾಲುಗಳ ಮುಂದೆ ವಾಹನ ನಿಲ್ಲಿಸಲು ಅಗತ್ಯವಾದ ಸೌಕರ್ಯಗಳನ್ನು ಅವು ಮಾಡಿ ಕೊಡುತ್ತವೆ. ಅವುಗಳು ಹೊರಗೆಸೆಯುವ ಕಸ-ಕಡ್ಡಿಗಳನ್ನು ಹೊತ್ತೊಯ್ಯುವ ವ್ಯವಸ್ಥೆಯನ್ನು ಅವು ಒದಗಿಸಿಕೊಡುತ್ತವೆ. ಆದರೆ ಇದೇ ಸೌಲಭ್ಯವನ್ನು ಸ್ಥಳೀಯ ಮಾರುಕಟ್ಟೆಗೆ ಮಾಡಿಕೊಡುವುದಿಲ್ಲ. ನಮ್ಮ ಹೊಸಪೇಟೆ ನಗರದಲ್ಲಿ ಒಂದು ಸಗಟು ಮಾರಾಟದ ತರಕಾರಿ ಮಾರುಕಟ್ಟೆಯಿದೆ. ಅಲ್ಲಿ ಗ್ರಾಹಕರು, ದನಗಳು, ದ್ವಿಚಕ್ರವಾಹನಗಳು, ಲಾರಿಗಳು, ಆಟೋಗಳು, ತರಕಾರಿ ಮಾರಾಟಗಾರರು ಹೀಗೆ ಎಲ್ಲರೂ ಮನಸ್ಸಿಗೆ ಬಂದಂತೆ ಎಲ್ಲೆಂದರಲ್ಲಿ ಬೇಕಾಬಿಟ್ಟಿಯಾಗಿ ನಿಂತು-ಕುಂತು-ನಡೆದಾಡುತ್ತಾ ಖರೀದಿ-ಮಾರಾಟ ನಡೆಸುತ್ತಿರುತ್ತಾರೆ. ಅದು ನಗರದ ಎ ಎಂಸಿ ಆವರಣದಲ್ಲಿ ನಡೆಯುತ್ತದೆ. ಲಕ್ಷಾಂತರ ರೂಪಾಯಿ ವ್ಯವಹಾರ ಪ್ರತಿ ನಿತ್ಯ ನಡೆಯುತ್ತದೆ. ಆದರೆ ಅಲ್ಲಿ ಒಂದು ವ್ಯವಸ್ಥೆಯನ್ನು ಮಾಡುವ ಬಗ್ಗೆ, ವಾಹನಗಳ ನಿಲುಗಡೆಗೆ ಸ್ಥಳವನ್ನು ಕಾಯ್ದಿರಿಸುವ ಬಗ್ಗೆ, ದನಗಳು ಮಾರುಕಟ್ಟೆ ಪ್ರವೇಶಿಸದ ಹಾಗೆ ಕ್ರಮಗಳನ್ನು ತೆಗೆದುಕೊಳ್ಳುವ ಬಗ್ಗೆ, ಅಲ್ಲಿ ಗ್ರಾಹಕರಿಗೆ ಶೌಚಾಲಯ ಒದಗಿಸುವ ಬಗ್ಗೆ, ಮಾರಾಟಗಾರರು ಸಾಲಾಗಿ ಕುಳಿತು/ನಿಂತು ವ್ಯಾಪಾರ ನಡೆಸುವ ರೀತಿಯ ಕ್ರಮಗಳನ್ನು ತೆಗೆದುಕೊಳ್ಳುವ ಬಗ್ಗೆ ಅಲ್ಲಿನ ಎ ಎಂಸಿಯ ಅಧಿಕಾರಿಗಳು ಮುಂದಾಗುತ್ತಿಲ್ಲ. ಇದು ನಿಜಕ್ಕೂ ಅವರ ಕರ್ತವ್ಯ. ಆದರೆ ಇಲ್ಲಿ ಕರ್ತವ್ಯ ಲೋಪವೇ ನಿಯಮವಾಗಿ ಕರ್ತವ್ಯ ಪಾಲನೆಯು ಅಪರೂಪದ ಸಂಗತಿಯಾಗಿದೆ. ವಿದೇಶಿ ಬಂಡವಾಳವಾದರೆ/ ಬಹುರಾಷ್ಟ್ರೀಯ ಕಂಪನಿಗಳಾದರೆ ಇದೇ ಅಧಿಕಾರಿಗಳು ಮೇಲೆ ಬಿದ್ದು ಸೇವೆ ಒದಗಿಸಿಕೊಡುತ್ತಾರೆ.

ಸ್ಥಳೀಯ ಆರ್ಥಿಕತೆ ಮತ್ತು ಮಾರುಕಟ್ಟೆಗಳು ಅನೇಕ ಬಗೆಯ ಪೆಟ್ಟುಗಳನ್ನು ಅನುಭವಿಸುತ್ತಿವೆ. ಗ್ರಾಹಕರೂ ಅವುಗಳಿಂದ ದೂರ ಸರಿಯುತ್ತಿದ್ದಾರೆ. ಸರ್ಕಾರಗಳು ಅವುಗಳ ನೆರವಿಗೆ ಬರುವುದಕ್ಕೆ ಪ್ರತಿಯಾಗಿ ಅವುಗಳನ್ನು ಹತ್ತಿಕ್ಕುತ್ತಿವೆ. ಸ್ಥಳೀಯ ಸರ್ಕಾರಗಳು ಅವುಗಳಿಗೆ ಪ್ರೋತ್ಸಾಹ ನೀಡುತ್ತಿಲ್ಲ. ಸ್ಥಳೀಯ ಆರ್ಥಿಕತೆಯ ವ್ಯವಹಾರದ ಪ್ರಮಾಣ ಕಡಿಮೆಯೇನಿಲ್ಲ. ಅದು ಒಳಗೊಳ್ಳುವ ಜನರ ಸಂಖ್ಯೆಯು ಅಪಾರ. ಅದು ಸ್ಥಳೀಯ ಸಂಪನ್ಮೂಲಗಳನ್ನು ಹೆಚ್ಚಿಗೆ ಅವಲಂಬಿಸಿರುತ್ತವೆ. ಅದು ಪರಿಸರ ಸ್ನೇಹಿಯಾಗಿರುತ್ತವೆ. ಅವು ಉಂಟು ಮಾಡಬಹುದಾದ ಪ್ರಕೃತಿಗೆ ಹಾನಿ ಮತ್ತು

ಉಂಟುಮಾಡಬಹುದಾದ ಟಾಕ್ಸಿಕ್ ವೇಸ್ಟ್ ಹೊರ ಚೆಲ್ಲುವುದು ಕಡಿಮೆ. ಇಂತಹ ಆರ್ಥಿಕತೆಗೆ ಇದೀಗ ಕುತ್ತು ಬಂದಿದೆ.

ಭಾಗ-3.

ನಮಗೆ ವಿದೇಶಿ ಬಂಡವಾಳ ಮತ್ತು ಬಹುರಾಷ್ಟ್ರೀಯ ಕಂಪನಿಗಳು ಯಾಕೆ ಬೇಕು?

ವಿದೇಶಿ ಬಂಡವಾಳವಿಲ್ಲದೆ ನಮ್ಮ ದೇಶವನ್ನು ಕಾಡುತ್ತಿರುವ ಬಡತನ, ಹಸಿವು, ಅರೆಹೊಟ್ಟೆ, ಅನಕ್ಷರತೆ ಮುಂತಾದ ಸಮಸ್ಯೆಗಳನ್ನು ಪರಿಹರಿಸುವುದು ಸಾಧ್ಯವಿಲ್ಲ ಎಂದು ಸರ್ಕಾರ ನಂಬಿರುವಂತೆ ಕಾಣುತ್ತದೆ. ಬಹುರಾಷ್ಟ್ರೀಯ ಕಂಪನಿಗಳು ಪ್ರೌಢ ತಂತ್ರಜ್ಞಾನವನ್ನು ನಮ್ಮ ದೇಶಕ್ಕೆ ತರುತ್ತವೆ ಎಂಬುದು ಅವುಗಳ ಪರವಾಗಿರುವ ಮತ್ತೊಂದು ವಾದ. ಪೈಪೋಟಿ ಉತ್ತಮವಾಗುವುದರಿಂದ ಸರಕುಗಳ ಗುಣಮಟ್ಟ ಉತ್ತಮವಾಗುತ್ತದೆ, ಗ್ರಾಹಕರಿಗೆ ಉತ್ತಮ ಸರಕುಗಳು ಸ್ಪರ್ಧಾತ್ಮಕ ಬೆಲೆಗೆ ದೊರೆಯುತ್ತವೆ, ಉತ್ಪಾದನೆಯಲ್ಲಿ ವೈವಿಧ್ಯತೆ ಸಾಧ್ಯವಾಗುತ್ತದೆ ಮುಂತಾದ ವಾದಗಳನ್ನು ವಿದೇಶಿ ಬಂಡವಾಳದ ಬಗ್ಗೆ ನೀಡಲಾಗುತ್ತಿದೆ. ಈ ವಾದದ ಮುಂದುವರಿದ ಭಾಗವಾಗಿ ಇಂದು ನಮ್ಮ ದೇಶದ ರಿಟೇಲ್ ಟ್ರೇಡಿಂಗ್ ಕ್ಷೇತ್ರದಲ್ಲಿ ವಿದೇಶಿ ಬಂಡವಾಳದ ಪ್ರವೇಶಕ್ಕೆ ಅವಕಾಶ ನೀಡುವ ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ. ವಿಮಾ ಕ್ಷೇತ್ರದಲ್ಲಿ ವಿದೇಶಿ ಬಂಡವಾಳದ ಪಾಲನ್ನು ಶೇ26 ರಿಂದ ಶೇ49ಕ್ಕೆ ಏರಿಸುವ ಬಗ್ಗೆ ಚಿಂತನೆ ನಡೆದಿದೆ. ಪೆನ್‌ಷನ್ ಫಂಡ್‌ನಲ್ಲಿ ಶೇ49ರಷ್ಟು ವಿದೇಶಿ ಬಂಡವಾಳದ ಪಾಲಿಗೆ ಅವಕಾಶ ನೀಡುವ ಕ್ರಮವನ್ನು ಜರುಗಿಸಲಾಗುತ್ತಿದೆ. ನಮ್ಮ ದೇಶದಲ್ಲಿ 1990ರ ನಂತರ ವಿದೇಶಿ ಬಂಡವಾಳದ ಮುಕ್ತ ಪ್ರವೇಶಕ್ಕೆ ಅವಕಾಶ ನೀಡಿದ್ದರಿಂದಾಗಿ ಜಿಡಿ ಯ ವಾರ್ಷಿಕ ಬೆಳವಣಿಗೆ ಪ್ರಮಾಣ 1960-70ರ ದಶಕಗಳಲ್ಲಿ ಶೇ 3-5ರಷ್ಟಿದ್ದುದು, 1990ರ ದಶಕದಲ್ಲಿ ಶೇ5-6ಕ್ಕೆ ತದನಂತರ 2005ರ ನಂತರ ಶೇ 8-9ಕ್ಕೆ ಏರಿಕೆಯಾಗಿದೆ ಎಂದು ಹೇಳಲಾಗುತ್ತಿದೆ. ವಿದೇಶಿ ಬಂಡವಾಳಕ್ಕೆ ಮತ್ತು ಬಹುರಾಷ್ಟ್ರೀಯ ಕಂಪನಿಗಳಿಗೆ ಅವಕಾಶ ನೀಡುವುದನ್ನು ಜಿಡಿ ಯನ್ನು ಏರಿಸುವ ಹೆಸರಿನಲ್ಲಿ ಮಾಡಲಾಗುತ್ತಿದೆ. ಇಲ್ಲಿರುವ ಗೃಹೀತವೆಂದರೆ ಜಿಡಿ ಯಲ್ಲಿ ಏರಿಕೆಯಾಗಿ ಬಿಟ್ಟರೆ ಸಮಾಜದಲ್ಲಿ ಇತರೆ ಸಮಸ್ಯೆಗಳಾದ ಬಡತನ, ಹಸಿವು, ಅರೆಹೊಟ್ಟೆ, ಅನಕ್ಷರತೆ, ಅಸ್ವಸ್ಥತೆ, ಅಸಮಾನತೆ ಮುಂತಾದವು ತಮ್ಮಷ್ಟಕ್ಕೆ ತಾವು ಪರಿಹಾರವಾಗಿ ಬಿಡುತ್ತವೆ ಎಂದು ಹೇಳಲಾಗುತ್ತಿದೆ. ಇದು ಹುಸಿಯಾಗಿರುವುದನ್ನು ಅಮರ್ತ್ಯಸೇನ್, ಮೆಹಬೂಬ್ ಉಲ್ ಹಕ್, ಜೀನ್ ಡ್ರೀಜ್, ಜೋಸೆಫ್ ಸ್ಟಿಗ್‌ಲಿಡ್ಜ್, ಪಾಲ್ ಸ್ಟ್ರೀಟನ್, ಮಾರ್ಥಾ ನುಸ್‌ಬೌಮ್ ಮುಂತಾದವರು ತೋರಿಸಿಕೊಟ್ಟಿದ್ದಾರೆ. ಯಾವುದನ್ನು ಟ್ರಿಕಲ್ ಡೌನ್ ಎಕನಾನಿಕ್ಸ್ ಎಂದು ಕರೆಯಲಾಗುತ್ತಿದೆಯೋ ಅದು ಯಾವ ಕಾಲದಲ್ಲೂ, ಯಾವ ದೇಶದಲ್ಲೂ ಯಶಸ್ವಿಯಾಗುರುವುದಕ್ಕೆ ನಮಗೆ ನಿದರ್ಶನ-ಉದಾಹರಣೆಗಳು ದೊರೆಯುತ್ತಿಲ್ಲ.



ವಿದೇಶಿ ಬಂಡವಾಳದಿಂದಾಗಿ ಮತ್ತು ಬಹುರಾಷ್ಟ್ರೀಯ ಕಂಪನಿಗಳ ಪ್ರವೇಶದಿಂದಾಗಿ ದೇಶದ ಆರ್ಥಿಕತೆಯು ಶ್ರೀಮಂತವಾಗಬಹುದು. ಆದರೆ ಜನರ ಬದುಕು ಇದರಿಂದ ಸಮೃದ್ಧವಾಗುವುದಿಲ್ಲ. ಜಿಡಿ ಯ ಏರಿಕೆ ಮತ್ತು ಬಡತನದ ನಿವಾರಣೆ ನಡುವೆ ವಿಲೋಮ ಸಂಬಂಧವೇನಿಲ್ಲ. ವಿದೇಶಿ ಬಂಡವಾಳದ ಮುಕ್ತ ಪ್ರವೇಶದಿಂದ ನಮ್ಮ ದೇಶದಲ್ಲಿ ಕಾರ್ಪೊರೇಟ್‌ಗಳ ಸಾಮ್ರಾಜ್ಯ ಬೆಳೆಯಬಹುದು. ಒಂದು ಕಡೆ ತೀವ್ರ ಬಡತನ-ಮತ್ತೊಂದು ಕಡೆ ಕಾರ್ಪೊರೇಟುಗಳ ಲಾಭದಲ್ಲಿ ಏರಿಕೆ. ಈ ರೀತಿಯಲ್ಲಿ ಕಾರ್ಪೊರೇಟುಗಳ ಸಾಮ್ರಾಜ್ಯ ಬೆಳೆಯುತ್ತಿದ್ದರೆ ಆ ಕಾರ್ಪೊರೇಟ್ ಕುಳಗಳನ್ನು ಪಾಲ್ ಕೃಗ್‌ಮನ್ 'ರಾಬರ್ ಬ್ಯಾರನ್ನುಗಳು' ಎಂದು ಕರೆಯುತ್ತಾನೆ. ರಿಟೇಲ್ ಟ್ರೇಡಿಂಗ್‌ನಲ್ಲಿ ವಿದೇಶಿ ಬಂಡವಾಳಕ್ಕೆ ಮುಕ್ತ ಅವಕಾಶ ನೀಡಿದರೆ ನಮ್ಮ ದೇಶದಲ್ಲಿ 'ರಾಬರ್ ಬ್ಯಾರನ್ನು'ಗಳು ಅಧಿಕವಾಗಬಹುದೇ ವಿನಾ ಬಡತನ, ಹಸಿವು, ಅರೆಹೊಟ್ಟೆ ನಿವಾರಣೆಯಾಗುವುದಿಲ್ಲ. ಈಗಾಗಲೆ ರಾಬರ್ ಬ್ಯಾರನ್ನುಗಳ(ಮಿಲಿಯನ್ನರು-ಬಿಲಿಯನ್ನರುಗಳು) ಸಂಖ್ಯೆ ಏರಿಕೆಯಾಗುತ್ತಿದೆ.

ತಿಮಿಂಗಿಲ ಗಾತ್ರದ ಕಾರ್ಪೊರೇಟುಗಳು ನಮ್ಮ ಸ್ಥಳೀಯ ಆರ್ಥಿಕತೆಯನ್ನು ಮತ್ತು ಸ್ಥಳಿಯ ಮಾರುಕಟ್ಟೆಯನ್ನು ತಿಂದು ನೀರು ಕುಡಿದು ಬಿಡುತ್ತವೆ. ವಿದೇಶಿ ಬಂಡವಾಳದ ಮುಕ್ತ ಪ್ರವೇಶದಿಂದ ಮತ್ತು ಬಹುರಾಷ್ಟ್ರೀಯ ಕಂಪನಿಗಳ ವ್ಯವಹಾರದಿಂದ ಉದ್ಯೋಗದ ಅವಕಾಶಗಳು ಹಿಗ್ಗುತ್ತವೆ ಎಂದು ಹೇಳಲಾಗುತ್ತಿದೆ. ಆದರೆ ಇಂದು ಕಾರ್ಪೊರೇಟುಗಳು 'ರೋಬಟ್ ಕ್ರಾಂತಿ'ಗೆ ಒಳಗಾಗಿರುವುದರಿಂದ ಅಲ್ಲಿ ಉದ್ಯೋಗಗಳ ಏರಿಕೆ ಸಾಧ್ಯವಿಲ್ಲ. ಹತ್ತಾರು ಜನರು ಮಾಡುವ ಕೆಲಸವನ್ನು ಒಂದು ರೋಬಟ್ ಮಾಡುವುದಾದರೆ ಕಾರ್ಪೊರೇಟುಗಳು ರೋಬಟ್ಟುಗಳನ್ನು ಇಷ್ಟ ಪಡುತ್ತಾರೆ ವಿನಾ ಕಾರ್ಮಿಕರನ್ನಲ್ಲ.

ಇಂದು ನಮ್ಮ ಆರ್ಥಿಕತೆಯು ಇನ್ನಿಲ್ಲದಂತೆ ಕುಸಿತವನ್ನು, ಸಂಕಷ್ಟಗಳನ್ನು, ಬಿಕ್ಕಟ್ಟುಗಳನ್ನು ಅನುಭವಿಸುತ್ತಿದೆ. ಬಡತನ ಮತ್ತು ಹಸಿವಿನ ಸಮಸ್ಯೆಗಳು ಭೂತಾಕಾರವಾಗಿ ಬೆಳೆಯುತ್ತಿವೆ. ಕೃಷಿಯಲ್ಲಿ ಬೆಳವಣಿಗೆ ನೆಲ ಕಚ್ಚಿ ಬಿಟ್ಟಿದೆ. ಬೆಲೆ ಏರಿಕೆಯು

ದುಡಿಮೆಗಾರರ ಬದುಕನ್ನು ಮೂರಾಬಟ್ಟೆ ಮಾಡುತ್ತಿದೆ. ವಿದೇಶಿ ವ್ಯಾಪಾರದಲ್ಲಿ ಕೊರತೆಯು ಮಿತಿ ಮೀರಿ ಬೆಳೆಯುತ್ತಿದೆ. ನಮ್ಮ ದೇಶದಲ್ಲಿ 2011-12ರಲ್ಲಿ ರಫ್ತುವಿನಲ್ಲಿ ಶೇ21ರಷ್ಟು ಬೆಳವಣಿಗೆಯಾಗಿದ್ದರೆ ಆಮದುವಿನಲ್ಲಿ ಶೇ 32ರಷ್ಟು ಬೆಳವಣಿಗೆಯಾಗಿದೆ. ಅಗತ್ಯ ವಸ್ತುಗಳ ಜೊತೆಯಲ್ಲಿ ಐಷಾರಾಮಿ ಸರಕುಗಳ ಆಮದು ಅಧಿಕಗೊಂಡಿದೆ. ಇದರಿಂದಾಗಿ ವಿದೇಶಿ ವ್ಯಾಪಾರದಲ್ಲಿನ ಕೊರತೆಯು ಉಲ್ಬಣಗೊಳ್ಳುತ್ತಿದೆ. ಆಂತರಿಕವಾಗಿ ,ಸ್ಕಲ್ ಕೊರತೆಯು ಸರ್ಕಾರದ ಕೈ ಮೀರುತ್ತಿದೆ. ನಮ್ಮ ಸರ್ಕಾರವು ವಿದೇಶಿ ಬಂಡವಾಳದ ಅಡಿಯಾಳಾಗುತ್ತಿದೆ ಇದು ನಿಯೋಲಿಬರಾಲಿಸವ್(ನವ ಉದಾರೀಕರಣವಾದ)ನ ಲಕ್ಷಣವಾಗಿದೆ. ನಮ್ಮ ಸಾರ್ವಜನಿಕ ಉದ್ದಿಮೆಗಳನ್ನು ವಿದೇಶಿ ಬಂಡವಾಳದ ವಶಕ್ಕೆ ನೀಡುವ ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳುತ್ತಿದೆ. ಉದಾಹರಣೆಗೆ ಜೀವ ವಿಮಾ ನಿಗಮವನ್ನು ತೆಗೆದುಕೊಳ್ಳಬಹುದು. ಜೀವವಿಮಾ ಕ್ಷೇತ್ರದಲ್ಲಿ ವಿದೇಶಿ ಬಂಡವಾಳದ ಪಾಲನ್ನು ಸದ್ಯದ ಶೇ26 ರಿಂದ ಶೇ 49ಕ್ಕೆ ಏರಿಸುವ ಕ್ರಮವನ್ನು ಸರ್ಕಾರ ತೆಗೆದುಕೊಳ್ಳುತ್ತಿದೆ. ಖಾಸಗಿ ಕಂಪನಿಗಳಿಗೆ ವಿಮಾ ಕ್ಷೇತ್ರದಲ್ಲಿ ಅವಕಾಶ ನೀಡಿದ ಮೇಲೆ ಜೀವ ವಿಮಾ ನಿಗಮ ಮತ್ತು ಖಾಸಗಿ ವಿಮಾ ಕಂಪನಿಗಳ ನಡುವೆ ವಿಪರೀತ ಪೈಪೋಟಿ ನಡೆದಿದೆ. ಆದರೆ ವಿಮಾ ಕ್ಷೇತ್ರದಲ್ಲಿನ ಜೀವ ವಿಮಾ ನಿಗಮದ ಸ್ಥಾನವನ್ನು ಅಲುಗಾಡಿಸಲು ಖಾಸಗಿ ವಿಮಾ ಉದ್ದಿಮೆಗಳಿಗೆ ಸಾಧ್ಯವಾಗಿಲ್ಲ. ಇಂದು ್ರಮಿಯಮ್ಮುಗಳ ಒಟ್ಟು ಮೊತ್ತ ಜೀವ ವಿಮಾ ನಿಗಮದ್ದು ರೂ 2,03,478 ಕೋಟಿಯಷ್ಟಿದ್ದರೆ ಖಾಸಗಿ ವಿಮಾ ಕಂಪನಿಗಳ ್ರಮಿಯಮ್ಮಿನ ಒಟ್ಟು ಮೊತ್ತ ರೂ88,131 ಕೋಟಿಯಾಗಿದೆ. ವಿಮಾ ಮಾರುಕಟ್ಟೆಯಲ್ಲಿ ಜೀವ ವಿಮಾ ನಿಗಮದ ಪ್ರಮಾಣ ಹೆಚ್ಚಾಗಿದೆ. ಜೀವ ವಿಮಾ ನಿಗಮದಲ್ಲಿ ಪಾಲಿಸಿದಾರರ ಬೇಡಿಕೆಯನ್ನು ಪರಿಹರಿಸುವ ಪ್ರಮಾಣ ಶೇ97ರಷ್ಟಿದ್ದರೆ ಖಾಸಗಿ ವಿಮಾ ಕಂಪನಿಗಳಲ್ಲಿ ಅದರ ಪ್ರಮಾಣ ಶೇ 86ರಷ್ಟಿದೆ. ಪಾಲಿಸಿದಾರರ ಬೇಡಿಕೆಯನ್ನು ತಿರಸ್ಕರಿಸುವ ಪ್ರಮಾಣ ಜೀವ ವಿಮಾ ನಿಗಮದಲ್ಲಿ ಶೇ 1 ರಷ್ಟಿದ್ದರೆ ಖಾಸಗಿ ವಿಮಾ ಉದ್ದಿಮೆಗಳಲ್ಲಿ ಅದು ಶೇ 8 ರಷ್ಟಿದೆ. ಜೀವ ವಿಮಾ ನಿಗಮದ ಒಟ್ಟು ಆಸ್ತಿ ಮೊತ್ತ ರೂ13.17 ಲಕ್ಷ ಕೋಟಿಯಷ್ಟಿದೆ. ಅದು ವಾರ್ಷಿಕ ರೂ1,130 ಕೋಟಿಯಷ್ಟು ಲಾಭಾಂಶವನ್ನು ಸರ್ಕಾರಕ್ಕೆ ನೀಡುತ್ತಿದೆ. ಜೀವ ವಿಮಾ ನಿಗಮವು ಸ್ಥಳೀಯತೆಯನ್ನು ರೂಢಿಸಿಕೊಂಡಿದೆ. ಅದು ತನ್ನ ಸಂಪನ್ಮೂಲವನ್ನು ಸಾರ್ವಜನಿಕ ವಲಯದ ಮೇಲೆ ವಿನಿಯೋಗಿಸುತ್ತದೆ. ಲಕ್ಷಾಂತರ ಜನರು ಅದನ್ನು ವರಮಾನಕ್ಕೆ ಅವಲಂಬಿಸಿಕೊಂಡಿದ್ದಾರೆ. ಅಂತಹ ಉದ್ದಿಮೆಯಲ್ಲಿ ವಿದೇಶಿ ಬಂಡವಾಳದ ಪ್ರವೇಶಕ್ಕೆ ಅನುಮತಿ ನೀಡುವ ಕ್ರಮಕ್ಕೆ ಸರ್ಕಾರ ಮುಂದಾಗಿದೆ. ಒಂದು ವೇಳೆ ಜೀವ ವಿಮಾ ನಿಗಮವು ಖಾಸಗೀಕರಣಕ್ಕೆ ಒಳಗಾಗಿ ಬಿಟ್ಟರೆ ಅದರಲ್ಲಿನ ಸಂಪನ್ಮೂಲವು ಅಭಿವೃದ್ಧಿಗೆ ವಿನಿಯೋಜನೆಯಾಗುವುದಕ್ಕೆ ಪ್ರತಿಯಾಗಿ ಶೇರು ಮಾರುಕಟ್ಟೆಯ ಮತ್ತು ಸ್ಪೆಕ್ಯುಲೇಟಿವ್ ವ್ಯವಹಾರದ ಪಾಲಾಗುವ ಸಾಧ್ಯತೆಯಿದೆ. ರೋಬಟ್ ಕ್ರಾಂತಿಯಿಂದಾಗಿ ಇಲ್ಲಿ ಉದ್ಯೋಗಗಳ ಅವಕಾಶಗಳು ಕುಗ್ಗುತ್ತವೆ.

ಒಟ್ಟಾರೆಯಾಗಿ ಇಷ್ಟನ್ನು ಹೇಳಬಹುದು. ವಿದೇಶಿ ಬಂಡವಾಳವನ್ನು ಅವಲಂಬಿಸದೆ ಮತ್ತು ಬಹುರಾಷ್ಟ್ರೀಯ ಕಂಪನಿಗಳಿಗೆ ರತ್ನಗಂಬಳಿ ಹಾಕಿ ದೇಶದೊಳಗೆ ಸ್ವಾಗತಿಸದೆ ನಾವು ನಮ್ಮ ದೇಶದ ಅಭಿವೃದ್ಧಿಯನ್ನು ನಿರ್ವಹಿಸಬಹುದು. ಬಂಡವಾಳ ಹೂಡಿಕೆಯಲ್ಲಿನ ಏರಿಕೆಯೇ ಅಭಿವೃದ್ಧಿಯಲ್ಲ. ಜಿಡಿ ಯಲ್ಲಿನ ಏರಿಕೆಯೇ ಅಭಿವೃದ್ಧಿಯಲ್ಲ. ಉತ್ಪಾದನೆಯಲ್ಲಿನ ಏರಿಕೆಯೇ ಅಭಿವೃದ್ಧಿಯಲ್ಲ. ಇವೆಲ್ಲ ಅಭಿವೃದ್ಧಿಗೆ ಅಗತ್ಯ. ಆದರೆ ಅವುಗಳಲ್ಲಿನ ವರ್ಧನೆಯೇ ಅಭಿವೃದ್ಧಿಯಲ್ಲ. ಏರಿಕೆಯಾದ ಉತ್ಪಾದನೆ ಮೇಲೆ ಮತ್ತು ಏರಿಕೆಯಾದ ವರಮಾನದ ಮೇಲೆ ಜನರು-ಅಂದರೆ ಬಡವರು, ದುಡಿಮೆಗಾರರು, ಮಹಿಳೆಯರು, ದಲಿತರು, ಆದಿವಾಸಿಗಳು. ಅಲ್ಪಸಂಖ್ಯಾತರು ಮುಂತಾದವರು ಹೇಗೆ ತಮ್ಮ ಹಕ್ಕುದಾರಿಕೆಯನ್ನು ಸ್ಥಾ ಸಿಕೊಳ್ಳುತ್ತಾರೆ-ಸಾಧಿಸಿಕೊಳ್ಳುತ್ತಾರೆ ಎಂಬುದು ಅಭಿವೃದ್ಧಿ. ಜನರ ಹಕ್ಕುದಾರಿಕೆಯಲ್ಲಿನ ವರ್ಧನೆಯೇ ಅಭಿವೃದ್ಧಿ. ವಿದೇಶಿ ಬಂಡವಾಳ ಮತ್ತು ಬಹುರಾಷ್ಟ್ರೀಯ ಕಂಪನಿಗಳು ವರಮಾನದ ಮೇಲಿನ, ಉತ್ಪಾದನೆ ಮೇಲಿನ, ಬಂಡವಾಳದ ಮೇಲಿನ ಜನರ ಹಕ್ಕುದಾರಿಕೆಯನ್ನು ವಿಸ್ತೃತಗೊಳಿಸುವುದಕ್ಕೆ ಪ್ರತಿಯಾಗಿ ಹತ್ತಿಕ್ಕಿ ಬಿಡುತ್ತವೆ. ಸ್ಥಳೀಯ ಆರ್ಥಿಕತೆ ಮತ್ತು ಸ್ಥಳೀಯ ಮಾರುಕಟ್ಟೆಗಳನ್ನು ಅವು ನಾಶ ಮಾಡಿ ಬಿಡುತ್ತವೆ. ಅಸಮಾನತೆಯನ್ನು, ಲಿಂಗ ತಾರತಮ್ಯವನ್ನು, ಹಸಿವನ್ನು, ಬಡತನವನ್ನು ಅವು ಉಲ್ಬಣಗೊಳಿಸುತ್ತವೆ. ವಿದೇಶಿ ಬಂಡವಾಳ ಮತ್ತು ಬಹುರಾಷ್ಟ್ರೀಯ ಕಂಪನಿಗಳು ಮಹಿಳಾ ವಿರೋಧಿಯೂ, ಉದ್ಯೋಗ ವಿರೋಧಿಯೂ, ಪರಿಸರ ವಿರೋಧಿಯೂ, ಸ್ಥಳೀಯತೆ ವಿರೋಧಿಯೂ, ಸಮಾನತೆ ವಿರೋಧಿಯೂ ಆಗಿರುತ್ತವೆ. ಸ್ವದೇಶಿ ಬಂಡವಾಳ ಮತ್ತು ರಾಷ್ಟ್ರೀಯ ಉದ್ದಿಮೆಗಳು ಸದ್ಗುಣಗಳ ಖನಿಗಳೇನಲ್ಲ, ನಿಜ. ಆದರೆ ಅವುಗಳನ್ನು ಸರ್ಕಾರವು ನಿಯಂತ್ರಿಸಬಹುದು. ಆದರೆ ವಿದೇಶಿ ಬಂಡವಾಳದ ಸಂದರ್ಭದಲ್ಲಿ ಇದು ತಿರುವು ಮುರುವಾಗುದ ಸಾಧ್ಯತೆಯಿದೆ.

ಈ ಎಲ್ಲ ಕಾರಣಗಳಿಂದ ನಾವು ವಿದೇಶಿ ಬಂಡವಾಳಕ್ಕೆ ಮತ್ತು ಬಹುರಾಷ್ಟ್ರೀಯ ಕಂಪನಿಗಳಿಗೆ ಮುಕ್ತ ಪ್ರವೇಶ ನೀಡುವ ಕ್ರಮವನ್ನು ರದ್ದು ಪಡಿಸುವ ಅಗತ್ಯವಿದೆ. ಸ್ಥಳೀಯ ಆರ್ಥಿಕತೆ ಮತ್ತು ಸ್ಥಳಿಯ ಮಾರುಕಟ್ಟೆಗಳಿಗೆ ರಕ್ಷಣೆ ನೀಡಬೇಕು ಮತ್ತು ಅವುಗಳನ್ನು ಪ್ರೋತ್ಸಾಹಿಸಬೇಕು. ಅಲ್ಲಿ ಸಾರ್ವಜನಿಕ ಬಂಡವಾಳ ಹೂಡಿಕೆ ಪ್ರಮಾಣ ಹೆಚ್ಚಾಗಬೇಕು. ವರಮಾನವನ್ನು ಕೇಂದ್ರದಲ್ಲಿಟ್ಟುಕೊಂಡಿರುವ ಅಭಿವೃದ್ಧಿ ಪ್ರಣಾಳಿಕೆಗೆ ಪ್ರತಿಯಾಗಿ ಇಂದು ನಾವು ಜನರನ್ನು, ದುಡಿಮೆಗಾರರನ್ನು, ಮಹಿಳೆಯರನ್ನು, ದಲಿತರನ್ನು ಕೇಂದ್ರದಲ್ಲಿಟ್ಟುಕೊಂಡಿರುವ ಅಭಿವೃದ್ಧಿ ಮಾದರಿಯನ್ನು ಅಳವಡಿಕೊಳ್ಳುವ ಬಗ್ಗೆ ಚಿಂತಿಸಬೇಕು ಮತ್ತು ಒತ್ತಾಯಿಸಬೇಕು.

■

ಕೈಗಾರಿಕಾ ಉತ್ಪಾದನೆಯಲ್ಲಿ ತೀವ್ರ ಹಿಂಜರಿತ ಕೃಷಿ ಉತ್ಪಾದನೆಯಲ್ಲಿ ತೀವ್ರ ಕುಸಿತ

ಬಿಜೆ ಆಡಳಿತದಲ್ಲಿ ರಾಜ್ಯ ಸರ್ವತೋಮುಖ ಅವನತಿಯತ್ತ.

ಆರ್. ರಾಮಕೃಷ್ಣ

ನಾಡಿನ ಸಮಸ್ತ ಸಮಸ್ಯೆಗಳಿಗೂ ಬಿಜೆ ಯೇ ಪರಿಹಾರ. ಬಿಜೆ ಅಧಿಕಾರಕ್ಕೆ ಬಂದರೆ ರಾಜ್ಯದಲ್ಲಿ ರೈತಪರ ಸರ್ಕಾರವನ್ನು ಪ್ರತಿಷ್ಠಾ ಸಲಾಗುವುದು. ನಾಡಿನಲ್ಲಿ ಸಮೃದ್ಧಿಯು ಉಕ್ಕಿ ಹರಿಯುವುದು. ಊರಿನ ರಸ್ತೆಗಳು ಥಳಥಳಿಸುವವು. ವಿದ್ಯುತ್ ಉತ್ಪಾದನೆ ಹೆಚ್ಚುವುದು. ಭ್ರಷ್ಟಾಚಾರವನ್ನು ಉಚ್ಚಾಟಿಸಿ ನಿರ್ಮೂಲನ ಮಾಡಲಾಗುವುದು.

ದಕ್ಷಿಣ ಭಾರತದ ಮೊದಲ ಬಿಜೆ ಸರ್ಕಾರವನ್ನು ಕಂಡ



ಕರ್ನಾಟಕದ ಅಭಿವೃದ್ಧಿ, ಸಮೃದ್ಧಿಯನ್ನು ಕಂಡು ಕರುಬಿ ಅಕ್ಕಪಕ್ಕದ ರಾಜ್ಯದ ಜನರೂ ಬಿಜೆ ಪಕ್ಷದ ಕಡೆಗೆ ವಾಲುವರು. ದಕ್ಷಿಣ ಭಾರತದಲ್ಲಿ ಬಿಜೆ ದಂಡಯಾತ್ರೆಗೆ ಕರ್ನಾಟಕವೇ ಹೆಬ್ಬಾಗಿಲು ಎಂಬ 2008 ರ ಸುಮಾರು 5 ವರ್ಷಗಳ ಹಿಂದಿನ ಬೊಬ್ಬೆಗಳನ್ನೆಲ್ಲ ಈಗ ನೆನ ಸಿಕೊಳ್ಳಬೇಕಾದ ಸಮಯ ಬರುತ್ತಿದೆ.

ಈಗ ಐದು ವರ್ಷಗಳ ಕಾಲ ಬಿಜೆ ಸರ್ಕಾರ ರಾಜ್ಯದಲ್ಲಿ ಅಧಿಕಾರ ನಡೆಸಿದ ಮೇಲೆ ಕರ್ನಾಟಕ ರಾಜ್ಯದ ಜನರ ಬದುಕು ಏನಾಗಿದೆ ?

ರಾಜ್ಯ ಎಂಥಾ ಅಭಿವೃದ್ಧಿ ಕಂಡಿದೆ ಅಂತ ಕೊಂಚ ಪರಿಶೀಲನೆ ನಡೆಸಬೇಕಾಗಿದೆ.

ಬಿಜೆ ಸಚಿವರು, ಮುಖ್ಯಮಂತ್ರಿಗಳು ಮುಂದಿನ ಚುನಾವಣೆಯನ್ನು ಬಿಜೆ ಯು ತನ್ನ ಸರ್ಕಾರದ ಸಾಧನೆಯ ಆಧಾರದಲ್ಲಿ ಎದುರಿಸುವುದು ಎಂದು ಈಗಲೂ ಹೇಳಿಕೊಂಡು ತಿರುಗುತ್ತಿದ್ದಾರೆ. ಇರಲಿ. ರಾಜ್ಯದಲ್ಲಿ ಬಿಜೆ ಸರ್ಕಾರವು ಅಧಿಕಾರಕ್ಕೆ ಬಂದ ಮೇಲೆ ಕೃಷಿಕ್ಷೇತ್ರ, ಕೈಗಾರಿಕಾ ಕ್ಷೇತ್ರ ಮತ್ತು ಸೇವಾಕ್ಷೇತ್ರಗಳಲ್ಲಿ ರಾಜ್ಯದಲ್ಲಿ ಆಗಿರುವ 'ಪ್ರಗತಿ ಏನೆಂದು ನೋಡಿ.

ಕೃಷಿ ಬೆಳವಣಿಗೆ ಅಧೋಗತಿಗೆ:

2005–06 ರ ಸಾಲು ಮತ್ತು 2007–08 ರ ಸಾಲಿನ ನಡುವೆ ಅಂದರೆ ಮೂರು ವರ್ಷಗಳ ಅವಧಿಯಲ್ಲಿ ರಾಜ್ಯದಲ್ಲಿ ಕೃಷಿ ಬೆಳವಣಿಗೆ ದರವು ಶೇ. ಸರಾಸರಿ 14.20 ರಷ್ಟು ಇತ್ತು. ಆದರೆ ಬಿಜೆ ಪಕ್ಷದ್ದೇ ಸರ್ಕಾರ ಬಂದ ಮೇಲಿನ ಐದು ವರ್ಷಗಳ ಅವಧಿಯಲ್ಲಿ ಅಂದರೆ 2008–09



ರಿಂದ 2011–12 ರ ಅವಧಿಯಲ್ಲಿ ಈ ಬೆಳವಣಿಗೆ ದರವು ವಾರ್ಷಿಕ ಸರಾಸರಿ ಶೇ. 11.35 ಕ್ಕೆ ಕುಸಿದಿದೆ. ಪ್ರತ್ಯೇಕ ಕೃಷಿ ಬಜೆಟ್, ಸುವರ್ಣಭೂಮಿ ಯೋಜನೆ, ರೈತರ ಸಾಲ ಮನ್ನಾ, ರೈತರಿಗೆ ಅತಿ ಕಡಿಮೆ ಬಡ್ಡಿದರದ ಸಾಲ ಯೋಜನೆ, ಸಾವಯವ ಕೃಷಿಗೆ ನೆರವು ಅಂತ ಏನೆಲ್ಲ ಮಂತ್ರ ಜ ಸಿದರೂ ಕೂಡ ಅನುದಾನ ನಿಜವಾದ ಅರ್ಥದಲ್ಲಿ ತಲುಪ ಬೇಕಾದ ಉದ್ದೇಶಕ್ಕೆ ಎಷ್ಟು ತಲು ದೆ ? ಘೋಷಿಸಿದ ನೆರವುಗಳು ನಿಜಕ್ಕೂ ರೈತರಿಗೆ ಎಷ್ಟರ ಮಟ್ಟಿಗೆ ನೆರವಾಗಿವೆ ಎಂಬುದಕ್ಕೆ ಈ ಕೃಷಿ ಬೆಳವಣಿಗೆ ಅಧೋಗತಿಯೇ ಸಾಕ್ಷಿ. ಕೃಷಿ ಅಭಿವೃದ್ಧಿ ಹೆಸರಿನಲ್ಲಿ ಈ ಸರ್ಕಾರ 'ಜಾಗತಿಕ ಕೃಷಿ ಬಂಡವಾಳ ಹೂಡಿಕೆದಾರರ ಸಮಾವೇಶ ನಡೆಸಿದ್ದನ್ನು ಇಲ್ಲಿ ನೆನಪು ಮಾಡಿಕೊಳ್ಳಬಹುದು.

ಕೈಗಾರಿಕಾ ಉತ್ಪಾದನೆಯಲ್ಲಿ ತೀವ್ರ ಹಿಂಜರಿತ

ಬಿಜೆ ಸರ್ಕಾರ ತನ್ನ ಅವಧಿಯಲ್ಲಿ ಎರಡು ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶಗಳನ್ನು ಮಾಡಿದೆ. ಕೈಗಾರಿಕಾ ಅಭಿವೃದ್ಧಿ , ಉದ್ಯೋಗ ಸೃಷ್ಟಿಯ ಬಗೆಗೆ ಅಲ್ಲಿ ಉದ್ದುದ್ದ ಭಾಷಣಗಳನ್ನು ಬಿಗಿಂಬಲಾಗಿದೆ. ನೋಂದಾಯಿತ(ಬೃಹತ್ ಮತ್ತು ಮಧ್ಯಮ ಕೈಗಾರಿಕಾ) ಉತ್ಪಾದನಾ ವಲಯದಲ್ಲಿ ಇದೇ 2005–06 ಮತ್ತು 2007–08ರ ನಡುವಿನ ಅವಧಿಯಲ್ಲಿ ವಾರ್ಷಿಕ ಸರಾಸರಿ ಶೇ. 17.63 ರಷ್ಟಿದ್ದ ಬೆಳವಣಿಗೆ ದರವು ಬಿಜೆ ಸರ್ಕಾರದ ಅವಧಿಯಲ್ಲಿ ವಾರ್ಷಿಕ ಸರಾಸರಿ ಶೇ. 9.55 ಕ್ಕೆ ಕುಸಿದಿದೆ. ನೋಂದಾಯಿಸದ (ಸಣ್ಣ ಉದ್ದಿಮೆಗಳ) ಉತ್ಪಾದನಾ ವಲಯದಲ್ಲಿ ಮಾತ್ರ ಬೆಳವಣಿಗೆ ದರ 14.07 ರಿಂದ 14.28 ಕ್ಕೆ ತಲು ದೆ. ಅಂದರೆ ಕೊಂಚ ಮಾತ್ರ ಪ್ರಗತಿ. ಸಹಜವಾಗಿಯೇ ಹೆಚ್ಚಿನ ಬೆಳವಣಿಗೆ ದಾಖಲಾಗಬೇಕಾಗಿದ್ದ ಮತ್ತೊಂದು ಕ್ಷೇತ್ರ ಸೇವಾ ವಲಯ. ಅಂದರೆ ಶಿಕ್ಷಣ ಸೇವೆ, ಆರೋಗ್ಯ ಸೇವೆ, ಕಾನೂನು ಸೇವೆ ಮುಂತಾದವುಗಳನ್ನೊಳಗೊಳ್ಳುವ ಈ ವಲಯದಲ್ಲಿ ಬೆಳವಣಿಗೆ ದರವು ಶೇ.17.63 ಇದ್ದದ್ದು ಬಿಜೆ ಅವಧಿಯಲ್ಲಿ ಇಳಿಕೆಯಾಗಿ 17.35ಕ್ಕೆ ಕುಸಿದಿದೆ.



ಈ ಮೇಲೆ ವಿವರಿಸಿದ ಎಲ್ಲ ವಲಯದ ಒಟ್ಟು ಬೆಳವಣಿಗೆಯನ್ನು ಒಳಗೊಳ್ಳುವ 'ರಾಜ್ಯದ ಒಟ್ಟು ಆಂತರಿಕ ಉತ್ಪಾದನೆ (ಜಿಎಸ್‌ಟಿ)ಯು ಹಿಂದಿನ ಅವಧಿಯಲ್ಲಿ ಶೇ. 16.20 ಇದ್ದದ್ದು ಬಿಜೆ ಅವಧಿಯಲ್ಲಿ 13.33ಕ್ಕೆ ಕುಸಿದಿದೆ.

ಈ ರೀತಿಯ ಆರ್ಥಿಕ ಹಿನ್ನಡೆಗೆ 2008ರಲ್ಲಿ ಕಂಡು ಬಂದ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಕೊಡುಗೆಯೂ ಒಂದಷ್ಟು ಇದೆ ಎಂಬ ವಿಷಯವನ್ನು ನಾವು ಇಲ್ಲಿ ಮರೆಮಾಚಬೇಕಿಲ್ಲ. ಆದರೆ ಬಿಕ್ಕಟ್ಟಿನ ಪರಿಣಾಮದಿಂದ ಸಂಕಷ್ಟಕ್ಕೊಳಗಾದ ಜನರ ನೆರವಿಗೆ ಧಾವಿಸಿ ಸೂಕ್ತ ಪರಿಹಾರ ಕ್ರಮಗಳು ಜನಪರ ಕಾರ್ಯಯೋಜನೆಯ ಮೂಲಕ ರಾಜ್ಯದ ಆರ್ಥಿಕ–ಅಭಿವೃದ್ಧಿ, ಮಾನವ ಅಭಿವೃದ್ದಿಯನ್ನು ಮುಂದಕ್ಕೊಯ್ಯುವ ಗಂಭೀರ ಜವಾಬ್ದಾರಿ ರಾಜ್ಯದ ಅಧಿಕಾರದ ಚುಕ್ಕಾಣಿ ಹಿಡಿದ ಬಿಜೆ ಸರ್ಕಾರದ ಮೇಲಿತ್ತು. ಆದರೆ ಅದರಲ್ಲಿ ಬಿಜೆ ಸರ್ಕಾರ ದಯನೀಯವಾಗಿ ವಿಫಲವಾಗಿದೆ ಎಂಬುದನ್ನು ಯಾರಾದರೂ ಗುರುತಿಸದೆ ಇರಲು ಸಾಧ್ಯವಿಲ್ಲ.

ಮಾನವ ಅಭಿವೃದ್ಧಿ ಬೆಳವಣಿಗೆ

ಹತ್ತೊಂಬತ್ತು ಪ್ರಮುಖ ರಾಜ್ಯಗಳ ಮಾನವ ಅಭಿವೃದ್ಧಿ ವರದಿ–2011 ಅನ್ನು ಕೈಲಿ ಹಿಡಿದು ಕೊಂಡು ಪರಿಶೀಲಿಸಿ ನೋಡಿದರೂ ಕೂಡ ಕರ್ನಾಟಕದ್ದು ನಿರಾಶಾದಾಯಕ ಪರಿಸ್ಥಿತಿ. ಎಂದಿನಂತೆ ಮಾನವ ಅಭಿವೃದ್ದಿಯಲ್ಲಿ ಕೇರಳ ರಾಜ್ಯ ಮುಂಚೂಣಿಯಲ್ಲಿದೆ. ಕೇರಳದ್ದು ಮೊದಲ ಸ್ಥಾನವಾದರೆ, ನೆರೆಯ ತಮಿಳು ನಾಡಿನದ್ದು ಆರನೇ ಸ್ಥಾನ. ಕರ್ನಾಟಕಕ್ಕೆ ಮಾತ್ರ 10 ನೇ ಸ್ಥಾನ. ಕರ್ನಾಟಕದ ಘನತೆಗೆ ಇದು ಖಂಡಿತ ಶೋಭೆ ತರುವ ವಿಚಾರವಲ್ಲ. ಏಕೆಂದರೆ ಕರ್ನಾಟಕ ರಾಜ್ಯವು ಸ್ವಾತಂತ್ರ್ಯಪೂರ್ವ ಕಾಲದಿಂದಲೂ ಶೈಕ್ಷಣಿಕ ಮತ್ತು ಕೈಗಾರಿಕಾ ಅಭಿವೃದ್ದಿಯ ವಿಷಯದಲ್ಲಿ ಇತರ ಹಲವು ರಾಜ್ಯಗಳಿಗಿಂತ ಮುಂದೆ ಇದ್ದ ರಾಜ್ಯ. ಇಂತಹ ಅನುಕೂಲವನ್ನು ಬಳಸಿಕೊಂಡು ರಾಜ್ಯದಲ್ಲಿ ಉತ್ತಮ ಮಾನವ ಅಭಿವೃದ್ದಿಯನ್ನು ಸಾಧಿಸುವಲ್ಲಿ ರಾಜ್ಯ ಬಿಜೆ ಸರ್ಕಾರ ವಿಫಲವಾಗಿದೆ ಎಂದು ಈ ಮಾನವ ಅಭಿವೃದ್ಧಿ ವರದಿ ಹೇಳುತ್ತಿದೆ. ಇಂತಹ ಕುಸಿತ, ಹಿನ್ನಡೆಯಿಂದ ಕರ್ನಾಟಕ ರಾಜ್ಯದ ಆರ್ಥಿಕತೆಯನ್ನು ಪಾರು ಮಾಡಿ ಕಾಪಾಡುವುದು ಒಂದು ತುರ್ತು ಅಗತ್ಯವಾಗಿದೆ. ಕೃಷಿ ಉತ್ಪಾದನೆ, ಕೈಗಾರಿಕಾ ಬೆಳವಣಿಗೆ ಆದಾಕ್ಷಣ ಜನರಿಗೆ ನೆಮ್ಮದಿಯ ಬದುಕು ಸಿಕ್ಕಿ ಬಿಟ್ಟಿತು ಎಂದೇನು ಅರ್ಥವಲ್ಲ. ಮತ್ತೆ ಹಂಚಿಕೆ ವಿತರಣೆ, ಸಾಮಾಜಿಕ ನ್ಯಾಯದ ಪ್ರಶ್ನೇ ಇದ್ದೇ ಇರುತ್ತದೆ. ಆದರೆ ಉತ್ಪಾನೆಯೇ ಕುಸಿದು, ಆರ್ಥಿಕತೆ ತೀವ್ರ ಬಿಕ್ಕಟ್ಟಿಗೆ ಸಿಲುಕಿ ಹಾಹಾಕಾರ ಉಂಟಾದರೆ ಹಂಚುವುದು ಸಾಮಾಜಿಕ ನ್ಯಾಯ ಕಾಪಾಡುವ ಪ್ರಶ್ನೆ ಎಲ್ಲಿಂದ ಬರುತ್ತದೆ?

ಶುಭಾಶಯಗಳೊಂದಿಗೆ,



ಬೈರಾರೆಡ್ಡಿ

ಪ್ರಥಮ ದರ್ಜೆ ಗುತ್ತಿಗೆದಾರರು

ಗುಡಿಬಂಡೆ

ಚಿಕ್ಕಬಳ್ಳಾಪುರ ಜಿಲ್ಲೆ



ಶುಭಾಶಯಗಳೊಂದಿಗೆ,

ಹಂಪಸಂದ್ರ ಗ್ರಾಮ ಪಂಚಾಯ್ತಿ

ಹಂಪಸಂದ್ರ, ಗುಡಿಬಂಡೆ (ತಾಲ್ಲೂಕು)

ನಾರಾಯಣ ಸ್ವಾಮಿ	ವಿಶ್ವನಾಥ್	ಅಶ್ವತ್ಥಮ್ಮ
ಅಧ್ಯಕ್ಷರು	ಕಾರ್ಯದರ್ಶಿ	ಉಪಾಧ್ಯಕ್ಷರು

ಸದಸ್ಯರು: ಅಶ್ವತ್ಥಪ್ಪ, ನರಸಿಂಹಪ್ಪ, ಭಾಗ್ಯಮ್ಮ ದೊಡ್ಡ ನಾರಾಯಣಪ್ಪ, ತಿಪ್ಪಮ್ಮ ರಾಮಕೃಷ್ಣ, ಗೌರಮ್ಮ ರತ್ನಮ್ಮ ಆದಿನಾರಾಯಣಸ್ವಾಮಿ, ಶ್ರೀನಿವಾಸ, ನಜೀರ್ ಅಹಮ್ಮದ್, ಶ್ರೀನಿವಾಸ ಕೆ. ನಾರಾಯಣಮ್ಮ ಈಶ್ವರಮ್ಮ ರಾಮಕೃಷ್ಣಪ್ಪ, ಅಂಜಿನಮ್ಮ ಚಲಪತಿ, ನರಸಿಂಹಪ್ಪ

ಶುಭಾಶಯಗಳೊಂದಿಗೆ,



ಜೂಲಪಾಳ್ಯ

ಗ್ರಾಮ ಪಂಚಾಯತಿ

ಬಾಗೇಪಲ್ಲಿ ತಾಲ್ಲೂಕು

ಚಿಕ್ಕಬಳ್ಳಾಪುರ

ಶುಭಾಶಯಗಳೊಂದಿಗೆ,



ಶ್ರೀ ಸಿ.ಎನ್. ಅಶ್ವತ್ಥ ನಾರಾಯಣ, ಕಾರ್ಯದರ್ಶಿ

ಶ್ರೀ ಗಂಗಪ್ಪ, ಅಧ್ಯಕ್ಷರು


ಚೌಟಕುಂಟಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘ

ಗುಡಿಬಂಡೆ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ

ಶುಭಾಶಯಗಳೊಂದಿಗೆ,


ಸೋಮೇಶ್ವರ ಹಾಲು ಉತ್ಪಾದಕರ ಸಹಕಾರ ಸಂಘ ನಿ.

ಗುಡಿಬಂಡೆ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ



ಎಸ್.ವಿ. ಶ್ರೀರಾಮರೆಡ್ಡಿ

ಅಧ್ಯಕ್ಷರು



ಎಸ್.ಎನ್. ಮಂಜುನಾಥ್

ಕಾರ್ಯದರ್ಶಿ

ನಿರ್ದೇಶಕರು

ಎಸ್.ವಿ. ರಾಮಚಂದ್ರ — ಆವುಲಪ್ಪ

ಎ.ಡಿ. ರಾಮಯ್ಯ — ತಿಮ್ಮಪ್ಪ

ಚನ್ನಮ್ಮ — ಹಸೀನಾಬಿ

ನಾಗರಾಜು — ಆದಿ ನಾರಾಯಣಪ್ಪ

ಶುಭಾಶಯಗಳೊಂದಿಗೆ,



ಶ್ರೀಮತಿ ಹುಲಿಗೆಮ್ಮ ಯುಕೋಟ

ಅಧ್ಯಕ್ಷರು

ಗ್ರಾಮ ಪಂಚಾಯತ್ ಧಡೇಸುಗೂರು

ತಾ. ಸಿಂಧನೂರು, ಜಿ. ರಾಯಚೂರು



ಶ್ರೀಮತಿ ತನುಜಾಕ್ಷಿ ತಾಯಪ್ಪ

ಉಪಾಧ್ಯಕ್ಷರು

ಆಡಳಿತ ಮಂಡಳಿ ಸದಸ್ಯರು

ಡಿ. ವಲಿಸಾಬ	ಸೈಯದ್ ಯೂನುಸಿ ಪಾಷ	ಮಲ್ಲಪ್ಪ ಗಡ್ಯಾಳು	ಪರುಶರಾಮ ನಾಯಕ
ಈರಮ್ಮ ಸಿದ್ದನಗೌಡ	ಜೈನಾಭೀ ಅಬ್ದುಲ್‌ಸಾಬ	ದುರುಗಪ್ಪ	ದುರುಗಮ್ಮ ಅಲ್ಲಪ್ಪ
ಕೆ. ಸತ್ಯನಾರಾಯಣ ರೆಡ್ಡಿ	ಎಂ. ವಿಶ್ವನಾಥ	ಈರಮ್ಮ ಬಾಗೋಡಿ	ಬಸವರಾಜ
ಹುಲಿಗೆಮ್ಮ ಕಟ್ಟೇರು	ಆದೆಪ್ಪ ಮುದ್ಲಿ	ಈರಮ್ಮ ಚಿದಾನಂದಪ್ಪ	

ಸಿಬ್ಬಂದಿ ವರ್ಗದವರು

ಸಿ.ಹೆಚ್. ಮುದುಕಪ್ಪ, ಕಾರ್ಯದರ್ಶಿ/ಪಿಡಿಓ	ಉಮಾಶಂಕರಯ್ಯ, ಕರ ವಸೂಲಿಗಾರ	ಸ್ವಾಮಿ ರಂಗಾರೆಡ್ಡಿ, ಕರ ವಸೂಲಿಗಾರ
ದುರುಗಪ್ಪ, ನೀರುಗಂಟಿ	ಅಂಬಣ್ಣ ನಾಯಕ, ಪಂಪ್ ಆಪರೇಟರ್	ಆಲಂ ಭಾಷಾ ನೀರುಗಂಟಿ
ಆದೆಪ್ಪ, ಪರಿಚಾರಕ	ಬರ್ಮಪ್ಪ, ಸಫಾಯಿ, ಧಡೇಸುಗೂರು	ಉಚ್ಚಪ್ಪ, ಸಫಾಯಿ, ಉಪ್ಪಳ
	ಹುಸೇನ ಭಾಷ, ನೀರುಗಂಟಿ	

ಶುಭಾಶಯಗಳೊಂದಿಗೆ

ರಾಮ್ಕೊ ಇಂಡಸ್ಟ್ರೀಸ್ ವರ್ಕರ್ಸ್ ಯೂನಿಯನ್

(ರಿ.ನಂ. 809)

ಕರೂರ್, ರಾಣೇಬೆನ್ನೂರ್ ತಾಲೂಕ್

ಹಾವೇರಿ ಜಿಲ್ಲೆ

ಅಧ್ಯಕ್ಷರು	:	ನಿತ್ಯಾನಂದಸ್ವಾಮಿ
ಪ್ರಧಾನಕಾರ್ಯದರ್ಶಿ	:	ಮೌಲಾಸಾಬ್ ಜೆ.
ಸಹಕಾರ್ಯದರ್ಶಿ	:	ನಿಂಗಪ್ಪ ಬಕ್ಕಜ್ಜಿ
ಉಪಾಧ್ಯಕ್ಷ (1)	:	ಚಂದ್ರಶೇಖರ್ ಎಚ್.
ಉಪಾಧ್ಯಕ್ಷ (2)	:	ಭೀಮಪ್ಪ ಬಾರ್ಕಿ
ಖಜಾಂಚಿ	:	ನಾಗಪ್ಪ ಶಾಮನೂರ

ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು

ಶುಭಾಶಯಗಳೊಂದಿಗೆ

ಮಹಾರಾಷ್ಟ್ರ ಹೈಬ್ರೀಡ್ ಸೀಡ್ಸ್ ಕಂಪನಿ ಕಾರ್ಮಿಕರ ಮತ್ತು ನೌಕರರ ಸಂಘ (ರಿ.ನಂ.07/97)

ಕಮದೋಡ, ರಾಣೇಬೆನ್ನೂರ್ ತಾಲೂಕ್, ಹಾವೇರಿ ಜಿಲ್ಲೆ

ಅಧ್ಯಕ್ಷರು	:	ನಿತ್ಯಾನಂದಸ್ವಾಮಿ
ಉಪಾಧ್ಯಕ್ಷ (1)	:	ಹನುಮಂತಪ್ಪ ಬಿ. ಅಮ್ಮನವರ
ಉಪಾಧ್ಯಕ್ಷ (2)	:	ಭೀಮಣ್ಣ ಎಚ್. ಕಂಟೆಣ್ಣನವರ
ಪ್ರಧಾನಕಾರ್ಯದರ್ಶಿ	:	ಗುಡ್ಡಪ್ಪ ಬಕ್ಕಜ್ಜಿ
ಸಹಕಾರ್ಯದರ್ಶಿ (1)	:	ರಾಜೇಸಾಬ ವೈ. ಮುಷ್ಠೂರ
ಸಹಕಾರ್ಯದರ್ಶಿ (2)	:	ಹನುಮಂತಪ್ಪ ಎನ್. ಕರಿಸೋಮಣ್ಣನವರ
ಖಜಾಂಚಿ	:	ಕುಮಾರ್ ಎಚ್. ಬನ್ನಿಕೋಡ
ಸಹಾಯ ಖಜಾಂಚಿ	:	ಚಂದ್ರಶೇಖರ್ ಎಸ್. ವಾಲಿಶೆಟ್ಟರ
ಕಾನೂನು ಸಲಹೆಗಾರರು	:	ಜೆ. ಮೌಲಾಸಾಬ್


ಇಂದು... ನಾಳೆ... ಇನ್ನಿಲ್ಲ - ಹೇಳಿದ ದಿನ ತಪ್ಪೊಲ್ಲ
ಕರ್ನಾಟಕ ಸಕಾಲ ಸೇವೆ ಅಧಿನಿಯಮ-2011
ಸಕಾಲ
ಬನ್ನಿ, ನಿಮ್ಮ ಹಕ್ಕು ಚಲಾಯಿಸಿ.
ವಿಳಂಬವಾದಲ್ಲಿ ಪ್ರತಿ ದಿನಕ್ಕೆ ರೂ. 20/-ರಂತೆ ನೌಕರರ ವೇತನದಿಂದ ನಾಗರಿಕರಿಗೆ ಪಾವತಿಸುವುದು
ಲಕ್ಷಾಂತರ ನಾಗರಿಕರ ಅರ್ಜಿಗಳು ಸಮಯಬದ್ಧವಾಗಿ ವಿಲೇವಾರಿಯಾಗಿವೆ
ಸ್ವೀಕೃತಿ ಪತ್ರ
ಕಡ್ಡಾಯವಾಗಿ ಅರ್ಜಿಗಳ ಸ್ವೀಕೃತಿ ಪತ್ರ ಪಡೆಯಿರಿ
ಮಾಹಿತಿ /ದೂರುಗಳಿಗಾಗಿ ಸಂಪರ್ಕಿಸಿ
080 44554455
SMS ಸ್ಥಿತಿ ಅರಿಯಲು
ನಿಮ್ಮ ಪತ್ರದ ಸಂಖ್ಯೆಯನ್ನು
09212357123ಗೆ
ಎಸ್‌ಎಂಎಸ್ ಕಳುಹಿಸಿ.
Website : www.sakala.kar.nic.in Email: sakala@kar.nic.in

BEST WISHES FROM MAHYCO

Putting Science Into Agriculture
Mahyco's Mission Since 1964

mahyco®
RESEARCH



A pioneering seed company, Mahyco is focused on developing genetically enhanced crops with the use of gene transfer technology. This ongoing research facilitates Mahyco to always remain at the forefront of supplying top quality seeds to the farming community. Mahyco believes in utilizing the latest technological developments for the good of farmers and the people. The recent developments in hybrid seeds would go a long way in addressing the need for feeding a growing population. It has always been Mahyco' s endeavour to provide the best hybrid seeds.



Maharashtra Hybrid Seeds Co. Ltd.
4th Floor, Resham Bhavan, 78, Veer Nariman Road, Mumbai-400020
Tel.:022 30273025, Fax: 022 22047871
E-mail: info@mahyco.com, website: www.mahyco.com

ಶುಭಾಶಯಗಳೊಂದಿಗೆ

ಅಧ್ಯಕ್ಷರು

ಕಾರ್ಯದರ್ಶಿಗಳು



ಬಾಗೇಪಲ್ಲಿ ತಾಲ್ಲೂಕು ಪಂಚಾಯ್ತಿ

ಬಾಗೇಪಲ್ಲಿ, ಚಿಕ್ಕಬಳ್ಳಾಪುರ ಜಿಲ್ಲೆ

'ವಿಶೇಷಾಂಕ' ಹೊರತರುತ್ತಿರುವ ಸಂದರ್ಭದಲ್ಲಿ
'ಜನಶಕ್ತಿ ಕನ್ನಡ ವಾರ ಪತ್ರಿಕೆ' ಗೆ
ಶುಭಾಶಯಗಳು

Taluk Agricultural produce Co-Op- Marketing Society Ltd.

Chinthamani -563 125.



ಕರ್ನಾಟಕ ಸರ್ಕಾರದ ಕಾರ್ಯಯೋಜನೆ

ಪರಿಶಿಷ್ಟ ಜಾತಿ/ಪಂಗಡದ ಉದ್ದಿಮೆದಾರರಿಗೆ ಬಡ್ಡಿ ಸಹಾಯಧನ

ನಿವ್ವಳ ಬಡ್ಡಿ ದರ
ವಾರ್ಷಿಕ
4%



ಕರಾಹಸಂಸ್ಥೆಯಿಂದ ಗ್ರಾಹಕ ಸ್ನೇಹಿ ಹಣಕಾಸು ಸೌಲಭ್ಯ

- ಪ್ರವರ್ತಕರು ಮೊದಲ ಹಂತದ ಉದ್ದಿಮೆದಾರರಾಗಿರಬೇಕು.
- ಘಟಕಗಳು ಕರಾಹಸಂಸ್ಥೆಯಿಂದ ಸಾಲ ಪಡೆದ ದಿನಾಂಕದಿಂದ 5 ವರ್ಷಗಳ ಅವಧಿಯವರೆಗೆ ಈ ಯೋಜನೆಯಡಿ ಬಡ್ಡಿ ಸೌಲಭ್ಯ ಪಡೆಯಲು ಅರ್ಹವಾಗಿರುತ್ತವೆ.
- ಈ ಯೋಜನೆಯಡಿ ಬಡ್ಡಿ ಸಹಾಯಧನ ಪಡೆಯಲು ಸೇವಾ ಕ್ಷೇತ್ರದ ಘಟಕಗಳೂ ಅರ್ಹವಾಗಿರುತ್ತವೆ.
- ಘಟಕಗಳು ಸಾಲ ಮರು ಪಾವತಿಯಲ್ಲಿ ಯಾವುದೇ ಸಂಸ್ಥೆಗೆ ಸುಸ್ತಿದಾರರಾಗಿರಬಾರದು.
- ಉದ್ದಿಮೆದಾರರು ಹೊಸ ಘಟಕಗಳ ಸ್ಥಾಪನೆ ಅಥವಾ ಅಸ್ತಿತ್ವದಲ್ಲಿರುವ ಘಟಕಗಳ ವಿಸ್ತರಣೆ / ವೈವಿಧ್ಯೀಕರಣ ಮತ್ತು ಆಧುನೀಕರಣ ಉದ್ದೇಶಗಳಿಗಾಗಿ ₹ 2 ಕೋಟಿಗಳವರೆಗೆ ಅವಧಿ ಸಾಲದ ಸೌಲಭ್ಯವನ್ನು ಒಂದಕ್ಕಿಂತ ಹೆಚ್ಚು ಬಾರಿ ಪಡೆಯಲು ಅರ್ಹರಾಗಿರುತ್ತಾರೆ.
- ಪ್ರವರ್ತಕರ ಪಾಲಿನ ಬಂಡವಾಳವನ್ನು ಗಣನೆಗೆ ತೆಗೆದುಕೊಂಡ ನಂತರ ಇದರಲ್ಲಿನ ಕೊರತೆಯನ್ನು ತುಂಬಲು ಗರಿಷ್ಠ ₹ 25.00 ಲಕ್ಷ ಸರಳ ಬೀಜ ಧನದ ಸೌಲಭ್ಯವನ್ನು ಕರ್ನಾಟಕ ಸರ್ಕಾರವು ಒದಗಿಸುತ್ತದೆ.

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ

ಪ್ರಧಾನ ಕಛೇರಿ : ಕೆಎಸ್‌ಎಫ್‌ಸಿ ಭವನ, ನಂ. 1/1, ತಿಮ್ಮಯ್ಯ ರಸ್ತೆ, ಬೆಂಗಳೂರು–560 052
ದೂ: 080–22263322/22258127/22250135, ಫ್ಯಾಕ್ಸ್: 22250126
e-mail: eg@ksfc.co website: www.ksfc.in

ನಿಮ್ಮ ಪ್ರಗತಿಯ ಪಾಲುದಾರ


ಜನನಿ-ಶಿಶು
ಸುರಕ್ಷಾ ಕಾರ್ಯಕ್ರಮ
ಗರ್ಭಿಣಿ ಮತ್ತು ನವಜಾತ ಶಿಶುಗಳ
ಸಂರಕ್ಷಣೆಗಾಗಿ ಎಲ್ಲಾ ಸರ್ಕಾರಿ ಆರೋಗ್ಯ ಸಂಸ್ಥೆಗಳಲ್ಲಿ
ಸಂಪೂರ್ಣ ಉಚಿತ ಸೇವೆ
ಎಲ್ಲಾ ಗರ್ಭಿಣಿಯರಿಗೆ ಮತ್ತು ನವಜಾತ ಶಿಶುಗಳಿಗೆ
ಹುಟ್ಟಿದ 30 ದಿನಗಳವರೆಗೆ ಕೆಳಕಂಡ ಸೇವೆಗಳು ಸಂಪೂರ್ಣ ಉಚಿತ
• ಹೆರಿಗೆ
• ಸಿಜೇರಿಯನ್ ಮತ್ತಿತರ ವೈದ್ಯಕೀಯ ಬಳಕೆ ವಸ್ತುಗಳು ಹಾಗೂ ರಕ್ತ ಪೂರೈಕೆ
• ಪ್ರಯೋಗಾಲಯ ಪರೀಕ್ಷೆಗಳು (ರಕ್ತ, ಮೂತ್ರ ಹಾಗೂ ಸ್ಕ್ಯಾನಿಂಗ್)
• ಒಳರೋಗಿಯಾಗಿ ತಂಗಿದ್ದಾಗ ಆಹಾರ (ಸಾಮಾನ್ಯ ಹೆರಿಗೆಗೆ ಎರಡು ದಿನ – ಸಿಜೇರಿಯನ್ ಹೆರಿಗೆಗೆ ಏಳು ದಿನ)
• ಮನೆಯಿಂದ ಆಸ್ಪತ್ರೆಗೆ ಮತ್ತು ಆಸ್ಪತ್ರೆಯಿಂದ ಮೇಲ್ದರ್ಜೆ ಆಸ್ಪತ್ರೆಗೆ ವಾಹನ ವ್ಯವಸ್ಥೆ
• ಎಲ್ಲಾ ತರಹದ ಸೇವಾ ಶುಲ್ಕದಿಂದ ವಿನಾಯಿತಿ
"ಕುಂದು ಕೊರತೆಗಳಿದ್ದಲ್ಲಿ,
ಜಿಲ್ಲಾಧಿಕಾರಿಗಳನ್ನು ಸಂಪರ್ಕಿಸಿ"
ಪ್ರಕಟಣೆ :- ಅಭಿಯಾನ ನಿರ್ದೇಶಕರು (ಎನ್.ಆರ್.ಹೆಚ್.ಎಂ.), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು-560 009